
# ಕರ್ನಾಟಕದ ಅನಿವಾಸಿ ಭಾರತೀಯ ನೀತಿ



ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ

ಕರ್ನಾಟಕ ಸರ್ಕಾರ

**ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ**

ಕರ್ನಾಟಕ ಸರ್ಕಾರ

# ಕರ್ನಾಟಕದ
# ಅನಿವಾಸಿ ಭಾರತೀಯ ನೀತಿ

ಸರ್ಕಾರಿ ಆದೇಶ ಸಂಖ್ಯೆ : ಸಿ.ಐ. 207 ಎಸ್.ಪಿ.ಐ. 2016 ದಿ:02.12.2016 ರ ಅನುಬಂಧ

# ಪರಿವಿಡಿ


| ಕ್ರಮ ಸಂಖ್ಯೆ | ವಿವರಗಳು | ಪುಟ |
|---|---|---|
| 1. | ಅನಿವಾಸಿ ಭಾರತೀಯ ನೀತಿಯ ಬಗ್ಗೆ ಸರ್ಕಾರಿ ಆದೇಶ | 5 |
| 2. | ಪೀಠಿಕೆ | 7 |
| 3. | ದೃಷ್ಟಿಕೋನ | 8 |
| 4. | ಗುರಿ | 9 |
| 5. | ಉದ್ದೇಶಗಳು | 9 |
| 6. | ಮಾರ್ಗೋಪಾಯ | 10 |
| 7. | ನೀತಿ ಕ್ರಮಗಳು | 10 |
| 8. | ವ್ಯಾಖ್ಯೆಗಳು | 23 |
| 9. | ಕರ್ನಾಟಕದ ಅನಿವಾಸಿ ಭಾರತೀಯ ಸಮಿತಿ ರಚನೆಯ ಸರ್ಕಾರಿ ಆದೇಶ | 24 |
| 10. | ಕರ್ನಾಟಕದ ಅನಿವಾಸಿ ಭಾರತೀಯ ನೀತಿಯಡಿಯಲ್ಲಿ ಉನ್ನತ ಇಲಾಖಾ ಪರಿಶೀಲನಾ ಸಮಿತಿ ರಚನೆಯ ಸರ್ಕಾರಿ ಆದೇಶ | 28 |
| 11. | ಕರ್ನಾಟಕದ ಅನಿವಾಸಿ ಭಾರತೀಯ ನೀತಿಯಡಿಯಲ್ಲಿ ಜಿಲ್ಲಾ ಮಟ್ಟದ ಅನಿವಾಸಿ ಭಾರತೀಯರ / ಕನ್ನಡಿಗರ ಹಿತರಕ್ಷಣಾ ಸಮಿತಿ ರಚನೆಯ ಸರ್ಕಾರಿ ಆದೇಶ | 30 |
| 12. | ಪ್ರಮುಖ ವಿದೇಶಾಂಗ ಸಚಿವಾಲಯಗಳ ಕಚೇರಿ ಸಂಪರ್ಕ ವಿವರಗಳು | 32 |
| 13. | ಪ್ರಮುಖ ಅಧಿಕಾರಿಗಳ ಸಂಪರ್ಕ ವಿವರಗಳು | 33 |
| 14. | ಜಿಲ್ಲಾ ಮಟ್ಟದ ಅನಿವಾಸಿ ಭಾರತೀಯರ / ಕನ್ನಡಿಗರ ಹಿತರಕ್ಷಣಾ ಸಮಿತಿಯ ಸಂಚಾಲಕರ ಸಂಪರ್ಕ ವಿವರಗಳು | 34 |

ಕರ್ನಾಟಕದ ಅನಿವಾಸಿ ಭಾರತೀಯ ನೀತಿ



# ಮುನ್ನುಡಿ

ಕರ್ನಾಟಕದ ಅನಿವಾಸಿ ಭಾರತೀಯ ನೀತಿಯನ್ನು ಲೋಕಾರ್ಪಣೆ ಮಾಡಲು ನನಗೆ ಅತೀವ ಹರ್ಷವೂ, ಸಂತೋಷವೂ ಆಗುತ್ತಿದೆ. ಮುನ್ನಡೆಯುತ್ತಿರುವ, ಸ್ಪಂದನಶೀಲ ಹಾಗೂ ಸಂಪದ್ಭರಿತ ಕರ್ನಾಟಕವನ್ನು ಕಟ್ಟಲು ಕರ್ನಾಟಕ ರಾಜ್ಯದ ಹಾಗೂ ವಿಶ್ವದೆಲ್ಲೆಡೆಯ ಅನಿವಾಸಿ ಭಾರತೀಯರ/ಅನಿವಾಸಿ ಕನ್ನಡಿಗರ ನಡುವೆ ಸುಸ್ಥಿರ ಸಂಬಂಧವನ್ನೇರ್ಪಡಿಸುವಲ್ಲಿ ಕ್ರಿಯಾವರ್ಧಕ ಪಾತ್ರ ವಹಿಸುವುದೇ ಈ ನೀತಿಯ ಉದ್ದೇಶವಾಗಿದೆ.

ಕರ್ನಾಟಕವು ವಿಸ್ತಾರದಲ್ಲಿ ಭಾರತದ ಏಳನೇ ಹಾಗೂ ಜನಸಂಖ್ಯೆಯಲ್ಲಿ ಎಂಟನೇ ಅತಿ ದೊಡ್ಡ ರಾಜ್ಯವಾಗಿದೆ. ಈ ರಾಜ್ಯದ ಜನತೆ – ಕನ್ನಡಿಗರು – ವಿಶ್ವಾದ್ಯಂತ ಕರ್ನಾಟಕವನ್ನು ಪ್ರತಿನಿಧಿಸುತ್ತಾರೆ ಹಾಗೂ ಅವರು ತಮ್ಮ ಉನ್ನತ ಕೌಶಲ್ಯಗಳಿಗೆ ಮತ್ತು ತಾವು ಎಲ್ಲಿ ವಾಸವಾಗಿರುತ್ತಾರೋ ಆ ದೇಶಗಳ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡುವಲ್ಲಿ ಯಶಸ್ವಿಯಾಗಿದ್ದಾರೆ.

ಅನಿವಾಸಿ ಭಾರತೀಯರು ಕರ್ನಾಟಕದ ಅಭಿವೃದ್ಧಿಗೆ ಮೌಲಿಕ ಕೊಡುಗೆ ನೀಡುವುದಲ್ಲದೆ, ತಾವು ವಾಸಿಸುವ ಆಯಾ ದೇಶಗಳ ಹಾಗೂ ಕರ್ನಾಟಕದ ನಡುವಣ ಸಂಬಂಧವನ್ನು ಬಲಪಡಿಸುವಲ್ಲಿ ಧನಾತ್ಮಕವಾಗಿ ಹೆಚ್ಚಿನ ಪಾತ್ರ ವಹಿಸುವಲ್ಲಿ ಕ್ರಿಯಾಶೀಲವಾಗಿದ್ದಾರೆ.

ರಾಜ್ಯದ ಅನಿವಾಸಿ ಭಾರತೀಯ ನೀತಿಯು ವಿಶ್ವ ಕನ್ನಡಿಗರ ಮಹದಾಕಾಂಕ್ಷೆಗಳು, ಅಗತ್ಯಗಳು ಹಾಗೂ ನಿರೀಕ್ಷೆಗಳನ್ನಷ್ಟೇ ವಿಸ್ತೃತವಾಗಿ ಪರಿಗಣಿಸುವುದರ ಜೊತೆಗೆ ಕರ್ನಾಟಕದ ಆರ್ಥಿಕ, ಸಾಮಾಜಿಕ ಮತ್ತು ತಾಂತ್ರಿಕ ಅಭಿವೃದ್ಧಿಯ ಕಡೆಗೂ ಗಮನ ಹರಿಸುತ್ತದೆ. ಕರ್ನಾಟಕ ಮೂಲದ ಅನಿವಾಸಿ ಭಾರತೀಯರ ಹಾಗೂ ರಾಜ್ಯದ ನಡುವಣ ಸಂಬಂಧವನ್ನು ಪರಸ್ಪರರಿಬ್ಬರಿಗೂ ಅನುಕೂಲವಾಗುವಂತೆ ಬೆಸೆಯುವ ದೇಶ–ನಿರ್ದಿಷ್ಟ ಉಪಾಯಗಳನ್ನು ಹೆಣೆಯುವುದಲ್ಲದೆ ಅವರು ಎದುರಿಸುವ ಸಮಸ್ಯೆಗಳನ್ನು ಬಗೆಹರಿಸುವಂತಹ ಕ್ರಮಗಳನ್ನೂ ಸಹ ಅದು ಒಳಗೊಂಡಿದೆ.


ಇಂತಹ ಏಕಮೇವಾದ್ವಿತೀಯ ನೀತಿಯನ್ನು ರೂಪಿಸಿರುವ ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ ಹಾಗೂ ಕರ್ನಾಟಕದ ಅನಿವಾಸಿ ಭಾರತೀಯ ಸಮಿತಿಯನ್ನು ನಾನು ಶ್ಲಾಘಿಸುತ್ತೇನೆ.

ಅನಿವಾಸಿ ನೀತಿಯ ಉಪಯೋಗ ಪಡೆದುಕೊಂಡು, ನಮ್ಮ ಪ್ರಗತಿಯಲ್ಲಿ ಸಾರ್ಥಕ ಜೊತೆಗಾರರಾಗಿರಿ ಎಂದು ಹೇಳುತ್ತ ಅನಿವಾಸಿ ಭಾರತೀಯರನ್ನು, ವಿಶೇಷವಾಗಿ ಕರ್ನಾಟಕದ ಅನಿವಾಸಿ ಭಾರತೀಯರನ್ನು, ಸ್ವಾಗತಿಸುತ್ತೇನೆ.

Siddaramaiah

ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು ಮತ್ತು ಅಧ್ಯಕ್ಷರು
ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ,
ಕರ್ನಾಟಕ ಸರ್ಕಾರ

ದಿನಾಂಕ : 29/12/2016
ಸ್ಥಳ : ಬೆಂಗಳೂರು



## ಸಂದೇಶ

ಇಂದು ಭಾರತವು, ಸುಮಾರು 185 ದೇಶಗಳಲ್ಲಿ ವಾಸಿಸುತ್ತಿರುವ ಪ್ರಪಂಚದ ಅತಿ ಹೆಚ್ಚಿನ ಅನಿವಾಸಿ ಭಾರತೀಯರು/ಮೂಲ ಅನಿವಾಸಿ ಭಾರತೀಯರನ್ನು ಹೊಂದಿದೆ. ಇತ್ತೀಚಿನ ವರದಿಯ ಪ್ರಕಾರ, ಅತಿ ಹೆಚ್ಚಿನ ಭಾರತೀಯರನ್ನು ಹೊಂದಿರುವ ಮೊದಲ 15 ದೇಶಗಳಲ್ಲಿ – ಇಳಿಕೆಯ ಕ್ರಮದಲ್ಲಿ – ಅಮೆರಿಕ, ಸೌದಿ ಅರೇಬಿಯ, ಮಲೇಷಿಯ, ಮ್ಯಾನ್ಮಾರ್, ಯುನೈಟೆಡ್ ಅರಬ್ ಎಮಿರೇಟ್ಸ್, ಯುನೈಟೆಡ್ ಕಿಂಗ್‌ಡಂ, ಶ್ರೀಲಂಕಾ, ದಕ್ಷಿಣ ಆಫ್ರಿಕ, ಕೆನಡ, ಮಾರಿಷಸ್, ಕುವೈತ್, ಓಮನ್, ಸಿಂಗಾಪುರ, ಕತಾರ್ ಮತ್ತು ನೇಪಾಳಗಳು ಸೇರಿವೆ.

ಭಾರತದ ದೇಶೀಯ ಜನಸಂಖ್ಯೆಯ ಅತ್ಯಲ್ಪ ಭಾಗವಾಗಿರುವ, ವಿಶ್ವದೆಲ್ಲೆಡೆ ಹರಡಿಕೊಂಡಿರುವ ಅನಿವಾಸಿ ಭಾರತೀಯರು ಅಸಾಧಾರಣವಾದ ಕುಶಲಿಗರೂ, ವಿದ್ಯಾವಂತರೂ ಹಾಗೂ ಸಿರಿವಂತರೂ ಆಗಿದ್ದಾರೆ. ಅಮೆರಿಕದ ಸೆನೆಟರುಗಳು, ನೊಬೆಲ್ ಪ್ರಶಸ್ತಿ ವಿಜೇತರು, ಫಾರ್ಚೂನ್–500 ಸಂಸ್ಥೆಗಳ ಮುಖ್ಯಸ್ಥರು ಹಾಗೂ ಪ್ರಶಸ್ತಿ ಪುರಸ್ಕೃತ/ಬಹುಮಾನಿತ ಲೇಖಕರುಗಳನ್ನೊಳಗೊಂಡ ಈ ಸಾಧಕರ ತಂಡದ ಸಾಮರ್ಥ್ಯವನ್ನು ಕರ್ನಾಟಕವು ಸಂಪೂರ್ಣವಾಗಿ ಬಳಸಿಕೊಳ್ಳಬೇಕು ಹಾಗೂ ಅವರು ತಮ್ಮ ಪೂರ್ವಿಕರ ಮಾತೃಭೂಮಿಯೊಡನೆ ಕ್ರಿಯಾಶೀಲವಾಗಿ ಬೆರೆಯುವಂತೆ ಮಾಡಲು ಸಹಕರಿಸಬೇಕು.

ರಾಜ್ಯದ ಅನಿವಾಸಿ ಭಾರತೀಯ ನೀತಿಯು ವಿಶ್ವದೆಲ್ಲೆಡೆ ಹರಡಿಕೊಂಡಿರುವ ಭಾರತೀಯರೊಂದಿಗೆ ಸಂಬಂಧಗಳನ್ನು ಬೆಸೆಯುವುದಲ್ಲದೆ, ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಹಿತರಕ್ಷಣೆ ಹಾಗೂ ಕಲ್ಯಾಣ, ಸಂಸ್ಕೃತಿ ಮತ್ತು ಉತ್ಸವಗಳ ಉತ್ತೇಜನೆ, ಅವರ ಕಲೆ, ಸಂಸ್ಕೃತಿ ಮತ್ತು ಸಾಂಸ್ಕೃತಿಕ ಪರಂಪರೆಯ ಉದ್ದೀಪನಕ್ಕೂ, ವಿದೇಶಗಳಲ್ಲಿರುವ ಉದ್ಯೋಗಾವಕಾಶಗಳ ಮಾಹಿತಿ ಹಂಚಿಕೆಗೂ, ಕೌಶಲ್ಯಗಳಿಕೆಗೂ ಮತ್ತು ಕನ್ನಡಿಗರು ವಿದೇಶಗಳಲ್ಲಿ ಉದ್ಯೋಗಗಳನ್ನು ಅವಲಂಬಿಸಲು ಪ್ರೋತ್ಸಾಹ ನೀಡಲೂ ಕೂಡ ಈ ಅನಿವಾಸಿ ಭಾರತೀಯ ನೀತಿಯು ಸಹಕಾರಿಯಾಗಿರುವುದನ್ನು ನೋಡಿ ನಾನು ಹರ್ಷಿತನಾಗಿದ್ದೇನೆ.

ಈ ಅನಿವಾಸಿ ಭಾರತೀಯ ನೀತಿಯನ್ನು ಹೊರತಂದಿರುವ ಕರ್ನಾಟಕದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಹಾಗೂ ಅನಿವಾಸಿ ಭಾರತೀಯ ಸಮಿತಿಯನ್ನು ನಾನು ಅಭಿನಂದಿಸುತ್ತೇನೆ ಹಾಗೂ ಅನಿವಾಸಿ ಭಾರತೀಯರು/ ಅನಿವಾಸಿ ಕನ್ನಡಿಗರು ಈ ನೀತಿಯ ಸಂಪೂರ್ಣ ಲಾಭವನ್ನು ಬಳಸಿಕೊಳ್ಳುವಂತಾಗಲೆಂದು ನಾನು ಆಶಿಸುತ್ತೇನೆ.

**ಆರ್.ವಿ.ದೇಶಪಾಂಡೆ**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು
ಹಾಗೂ ಮೂಲ ಸೌಕರ್ಯಗಳ ಅಭಿವೃದ್ಧಿ ಸಚಿವರು,
ಕರ್ನಾಟಕ ಸರ್ಕಾರ

ದಿನಾಂಕ: 20/12/2016
ಸ್ಥಳ: ಬೆಂಗಳೂರು







## ಸಂದೇಶ

ಕರ್ನಾಟಕ ಸರ್ಕಾರದ ಅನಿವಾಸಿ ಭಾರತೀಯ ಸಮಿತಿಯ ಉಪಾಧ್ಯಕ್ಷೆಯಾಗಿ ನನ್ನನ್ನು ನಾಮನಿರ್ದೇಶನ ಮಾಡಿರುವುದಕ್ಕೆ ಸರ್ಕಾರವನ್ನು ಅಭಿನಂದಿಸಲು ನನಗೆ ಅತೀವ ಸಂತಸವೆನಿಸುತ್ತದೆ. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿದೇಶೀ ಭಾರತೀಯ ಸಮುದಾಯದೊಂದಿಗಿನ ನನ್ನ ಸುದೀರ್ಘ ಸೇವೆಯನ್ನು ಅನಿವಾಸಿ ಕನ್ನಡಿಗರ ಸಮುದಾಯಕ್ಕೆ ಉಪಯೋಗವಾಗುವಂತೆ ಬಳಸಿಕೊಳ್ಳಲು ಈ ಹೊಸ ಹುದ್ದೆಯು ನನಗೆ ಅತ್ಯಂತ ಮಹತ್ವದ ಒಂದು ಸದವಕಾಶವನ್ನು ಒದಗಿಸಿಕೊಟ್ಟಿದೆ. ವಿದೇಶದ ನಮ್ಮ ಸಹೋದರಿ ಹಾಗೂ ಸಹೋದರರ ಮನದಾಳದಲ್ಲಿರುವ ಕರ್ನಾಟಕ ಸರ್ಕಾರ ಹಾಗೂ ಜನತೆಯ ಹಿತಾಸಕ್ತಿಗಳು ಅನಿವಾಸಿ ಭಾರತೀಯ ನೀತಿಯಲ್ಲಿ ಪ್ರತಿಫಲಿತವಾಗಿವೆ ಎನ್ನುವ ವಿಶ್ವಾಸ ನನ್ನದು.

ಅನಿವಾಸಿ ಭಾರತೀಯರು ಅದರಲ್ಲೂ ವಿಶೇಷವಾಗಿ ಅನಿವಾಸಿ ಕನ್ನಡಿಗರು ಅಭಿವೃದ್ಧಿ ಹೊಂದಿದ ದೇಶದಲ್ಲಾದರೂ ಇರಲಿ ಅಥವ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಾದರೂ ಇರಲಿ, ಅನಿವಾಸಿ ಭಾರತೀಯರು ಸತತವಾಗಿ ಹೊಸಹೊಸ ಸವಾಲುಗಳನ್ನೆದುರಿಸುತ್ತಿರುತ್ತಾರೆಂದು ನನಗೆ ಖಂಡಿತವಾಗಿಯೂ ಮನವರಿಕೆಯಾಗಿದೆ. ಅವರು ಈ ಸವಾಲುಗಳನ್ನು ಸಮರ್ಥವಾಗಿಯೇ ಎದುರಿಸುವ ಶಕ್ತಿ ಹೊಂದಿದ್ದಾರೆ ಹಾಗೂ ಅದನ್ನು ತಮಗಾಗಿ, ತಮ್ಮ ಕುಟುಂಬಗಳಿಗಾಗಿ, ತಮ್ಮ ರಾಜ್ಯಕ್ಕಾಗಿ ಹಾಗೂ ದೇಶಕ್ಕಾಗಿ ಯಶಸ್ವಿಯಾಗಿ ಬಳಸಿಕೊಳ್ಳಬಲ್ಲರೆಂದು ನಾವು ಚರಿತ್ರೆಯಿಂದ ಅರಿತಿದ್ದೇವೆ. ಬರ್ಮ, ಉಗಾಂಡ, ಫಿಜಿ, ದಕ್ಷಿಣ ಅಮೆರಿಕ, ಮಲೇಷಿಯ ಮತ್ತು ಕ್ಯಾರೀಬಿಯನ್ ದೇಶಗಳಲ್ಲಿನ ಘಟನಾವಳಿಗಳು ಅಂತಹ ಪರಿಸ್ಥಿತಿಗಳಿಗೆ ಹೊಂದಾಣಿಕೆ, ಪರಸ್ಪರಾವಲಂಬನೆ ಮತ್ತು ಧೈರ್ಯವನ್ನು ಕಲಿಸುವ ಪಾಠಗಳಾಗಿವೆ. ಎಲ್ಲಾ ಅನಿವಾಸಿ ಭಾರತೀಯರ ಆದರ್ಶವೆನಿಸಿದ ಮಹಾತ್ಮ ಗಾಂಧಿಯಂತಹ ವಿಶ್ವವಿಖ್ಯಾತರೂ ಅವರಲ್ಲಿದ್ದಾರೆ.

ಮುಂದಿನ ಕೆಲವೇ ವರ್ಷಗಳಲ್ಲಿ ಭಾರತವು ವಿಶ್ವದ ಅತ್ಯಂತ ಬೃಹತ್ ದುಡಿಯುವ ಯುವಶಕ್ತಿಯನ್ನೊಳಗೊಂಡ ದೇಶವಾಗಲಿದೆ. ಈಗಿನ್ನೂ ಗೊತ್ತಿರದ/ ಆವಿಷ್ಕರಿಸಿರದ ಹಲವಾರು ಹೊಸ ಕೆಲಸಗಳನ್ನು ಕೈಗೊಳ್ಳಲು ಹಲವರು ನಮ್ಮನ್ನು ಕೇಳಿಕೊಳ್ಳಲಿದ್ದಾರೆ. ನಮ್ಮ ಯುವಜನಾಂಗಕ್ಕೆ ಸೂಕ್ತವಾದ ಶಿಕ್ಷಣವನ್ನು ಮತ್ತು ಕೌಶಲ್ಯಗಳನ್ನು ಕಲಿಸಿಕೊಟ್ಟರೆ, ಅವರು ವಿಶ್ವಾದ್ಯಂತ ಅತ್ಯಂತ ಬೇಡಿಕೆಯಲ್ಲಿರುವವರಾಗುತ್ತಾರೆ. ಆದ್ದರಿಂದ ವಿದೇಶದಲ್ಲಿರುವ ಭಾರತೀಯ ಸಮುದಾಯದ ಸಾಮರ್ಥ್ಯವು ಮುಂದೆ ಹೆಚ್ಚುತ್ತಾ ಹೋಗುವುದೇ ವಿನಃ ಕಡಿಮೆಯಾಗುವುದಿಲ್ಲ ಎನ್ನುವ ಆಶಾಭಾವನೆ ನನ್ನದು.

ರಾಜ್ಯದ ಕ್ರಿಯಾಶೀಲ ಮುಖ್ಯಮಂತ್ರಿಯವರ ಸಾರಥ್ಯದ ಕರ್ನಾಟಕ ಸರ್ಕಾರಕ್ಕೆ ಅನಿವಾಸಿ ಕನ್ನಡಿಗರು ಭವಿಷ್ಯದಲ್ಲಿ ಎದುರಿಸಬಹುದಾದ ಸವಾಲುಗಳು ಹಾಗೂ ಪಡೆಯಬಹುದಾದ ಅವಕಾಶಗಳ ಬಗ್ಗೆ ಅತ್ಯಂತ ಕರಾರುವಾಕ್ಕಾದ ಅರಿವಿದೆ. ಅವರ ದೂರದೃಷ್ಟಿ ಹಾಗೂ ಸಹೃದಯತೆಗಳಿಂದಾಗಿ ಅನಿವಾಸಿ ಕನ್ನಡಿಗರ ಕಲ್ಯಾಣಕ್ಕಾಗಿ ಅತ್ಯಂತ ಹೆಚ್ಚಿನ ಸೇವೆಯನ್ನು ನೀಡಬಲ್ಲೆನೆಂಬ ವಿಶ್ವಾಸ ಹೊಂದಿರುವೆ. ಭಾರತದಲ್ಲಾಗಲೀ, ವಿದೇಶದಲ್ಲಾಗಲೀ, ನಾನು ಎಲ್ಲರ ಮಾರ್ಗದರ್ಶನ ಹಾಗೂ ಬೆಂಬಲವನ್ನು ಪಡೆಯುವೆನೆಂಬ ದೃಢ ವಿಶ್ವಾಸ ಹೊಂದಿದ್ದೇನೆ.

**ಡಾ. ಆರತಿ ಕೃಷ್ಣ**
ಉಪಾಧ್ಯಕ್ಷರು,
ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ
ಕರ್ನಾಟಕ ಸರ್ಕಾರ

ದಿನಾಂಕ: 22/12/16
ಸ್ಥಳ: ಬೆಂಗಳೂರು



## ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ

ಕೊಠಡಿ ಸಂಖ್ಯೆ 220ಇ & ಎಫ್, 2ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.

### ಒಂದು ಮಾತು

ಭಾರತೀಯರು ಶಿಕ್ಷಣ, ವ್ಯಾಪಾರ, ಉದ್ಯೋಗವನ್ನು ಅರಸಿ ತಲೆಮಾರುಗಳ ಹಿಂದೆ ಬದುಕನ್ನು ಕಟ್ಟಿಕೊಳ್ಳಲು ಸಾಗರೋತ್ತರ ದೇಶಗಳಿಗೆ ತೆರಳಿದರು. ಬದುಕು ಕಟ್ಟಿಕೊಂಡ ಆ ಕುಟುಂಬಗಳು ಅ ದೇಶದ ನೆಲದಲ್ಲೇ ಸಮಾಜದಲ್ಲಿ ಹಾಸುಹೊಕ್ಕಾಗಿ, ಬಹಳಷ್ಟು ಭಾರತೀಯರು ಅದರಲ್ಲೂ ಕರ್ನಾಟಕದ ಮೂಲದವರು ಅಲ್ಲಲ್ಲೇ ಉನ್ನತ ಪದವಿಗಳನ್ನು ಹೊಂದಿದ್ದಾರೆ. ಕೊಲ್ಲಿ ರಾಷ್ಟ್ರಗಳಲ್ಲಿ ಬಹುತೇಕ ಕನ್ನಡಿಗರು ತಾವು ಬೆಳೆದಿದ್ದಾರೆ, ಆ ದೇಶವನ್ನು ಬೆಳೆಸಿದ್ದಾರೆ. ಹೀಗಾಗಿ, ಅನಿವಾಸಿ ಮತ್ತು ಸಾಗರೋತ್ತರ ಕನ್ನಡ ಸಮುದಾಯ ಸದಾ ಸ್ಮರಣೆಗೆ ಅರ್ಹರು.

ವಿಶ್ವದ ನಾನಾ ಭಾಗಗಳಲ್ಲಿ ಚದುರಿ ಹೋಗಿರುವ ಭಾರತೀಯ ಮೂಲದ ಅನಿವಾಸಿ ಕನ್ನಡಿಗರನ್ನು ಒಗ್ಗೂಡಿಸುವುದು, ತಾಯ್ನಾಡಿನ ಜೊತೆ ಹೊಂದಿರುವ ಸಂಬಂಧವನ್ನು ಬಲಪಡಿಸುವುದು, ಸಾಂಸ್ಕೃತಿಕವಾಗಿ ಸಂಘಟಿಸುವ ಜೊತೆಗೆ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸುವುದನ್ನು ಅನಿವಾಸಿ ಭಾರತೀಯ ಸಮಿತಿ ಉತ್ತೇಜಿಸುತ್ತಾ ಬಂದಿದೆ.

ವಿಶ್ವದಲ್ಲೇ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಪೈಕಿ ಕರ್ನಾಟಕವು ಮುಂಚೂಣಿಯಲ್ಲಿದೆ. ಬಂಡವಾಳ ಹೂಡಿಕೆಗೆ ಕರ್ನಾಟಕದಲ್ಲಿ ವಿಫುಲವಾದ ಅವಕಾಶಗಳಿವೆ. ಇಲ್ಲಿ ಬಂಡವಾಳ ಹೂಡುವುದಕ್ಕೆ ಸಾಗರೋತ್ತರ ದೇಶಗಳು ಉತ್ಸುಕವಾಗಿದೆ. ಕರ್ನಾಟಕದಲ್ಲಿ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನದ ಜೊತೆಗೆ ಕೈಗಾರಿಕೆ, ಸಮೂಹ ಸಂವಹನ, ಕೃಷಿ ಸಂಬಂಧಿಸಿದ ಉದ್ಯಮಗಳಲ್ಲಿ ಹೊಸ ಹೊಸ ಸಂಸ್ಥೆಗಳು ತೆರೆದುಕೊಳ್ಳುತ್ತಿವೆ.

ಬಂಡವಾಳ ಹೂಡಲು ಬರುವ ಎಲ್ಲಾ ಅನಿವಾಸಿ ಭಾರತೀಯರಿಗೆ ಅದರಲ್ಲೂ ವಿಶೇಷವಾಗಿ ಅನಿವಾಸಿ ಕನ್ನಡಿಗರಿಗೆ ಮತ್ತು ಅವಕಾಶಗಳ ಅನ್ವೇಷಣೆಗೆ ಕರ್ನಾಟಕ ಆಕರ್ಷಣೆ ಪ್ರದೇಶ, ಹೂಡಿಕೆಗೆ ಕರ್ನಾಟಕದಲ್ಲಿ ಇರುವಷ್ಟು ಉತ್ತಮ ಹಾಗೂ ಸುರಕ್ಷಿತ ವಾತಾವರಣ ಇನ್ನಾವುದೇ ದೇಶದಲ್ಲಿ ಇಲ್ಲ ಎನ್ನುವುದನ್ನು ವಿಶ್ಲೇಷಿಸಿದೆ. ಬಂಡವಾಳ ಹೂಡಿಕೆ ಕ್ಷೇತ್ರದಲ್ಲಿ ಕರ್ನಾಟಕ ಸಾಕಷ್ಟು ಮುಂಚೂಣಿಯಲ್ಲಿದ್ದರೂ, ವಿದೇಶದಲ್ಲಿ ನೆಲೆಸಿರುವ ಕನ್ನಡಿಗರಿಗಾಗಿ ಪ್ರತ್ಯೇಕ ಪಿ.ಐ.ಬಿ.ಸಿ.ಸಿ.ಐ ಘಟಕವನ್ನು ಕರ್ನಾಟಕದಲ್ಲಿ ತೆರೆಯಲಾಗಿದೆ.

ಅನಿವಾಸಿ ಕನ್ನಡಿಗರಲ್ಲಿ ಬಂಡವಾಳ ಹೂಡಿಕೆಯನ್ನು ಉತ್ತೇಜಿಸುವ ದೃಷ್ಟಿಯಿಂದ ನೂತನ ಅನಿವಾಸಿ ಭಾರತೀಯ ನೀತಿಯನ್ನು ಕರ್ನಾಟಕ ಸರ್ಕಾರ ಜಾರಿಗೆ ತಂದಿದೆ. ಅನಿವಾಸಿ ಕನ್ನಡಿಗರಿಗೆ (ಎನ್.ಆರ್.ಕೆ) ಅಧಿಕೃತ ಗುರುತಿನ ಚೀಟಿಯಾಗಿ ಅನಿವಾಸಿ ಕನ್ನಡಿಗರ ಕಾರ್ಡ್ ವಿತರಣೆ, ಅನಿವಾಸಿ ಕನ್ನಡಿಗರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ರಾಜ್ಯ ಮಟ್ಟದಲ್ಲಿ ಅನಿವಾಸಿ ಭಾರತೀಯ ಸಮಿತಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದೆ. ಅನಿವಾಸಿ ಕನ್ನಡಿಗರು ಮತ್ತು ರಾಜ್ಯದ ವಿವಿಧ ಸಂಘಟನೆಗಳೊಂದಿಗೆ ಸಂಪರ್ಕ ಕಲ್ಪಿಸುವ ಜಾಲತಾಣ ಸೃಷ್ಟಿ, ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಎರಡು ಲಕ್ಷರೂಪಾಯಿವರೆಗಿನ ವಿಮಾ ಸೌಲಭ್ಯ, ಅನಿವಾಸಿ ಕನ್ನಡಿಗರೊಂದಿಗೆ ಸಾಂಸ್ಕೃತಿಕ ವಿನಿಮಯ ಯೋಜನೆ, ವಿಶೇಷ ಪ್ರವಾಸ ಏರ್ಪಡಿಸುವುದು, ತಾಯ್ನಾಡಿನಲ್ಲಿ ಸೇವೆ ಸಲ್ಲಿಸಲು ಆಸಕ್ತಿ ಹೊಂದಿರುವ ಅನಿವಾಸಿ ಕನ್ನಡಿಗರಿಗೆ ಉತ್ತೇಜನ ನೀಡಲು ನಮ್ಮ ಊರು, ನಮ್ಮ ನಾಡು ಯೋಜನೆ, ವಿಶ್ವದೆಲ್ಲೆಡೆ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸಲು ಕನ್ನಡ ಕೂಟ ಆರಂಭಿಸುವುದು, ಉತ್ತಮ ಸಾಧನೆ ಮಾಡಿದ ಒಬ್ಬ ಅನಿವಾಸಿ ಕನ್ನಡಿಗನಿಗೆ ಪ್ರತಿ ವರ್ಷ "ಅನಿವಾಸಿ ಕನ್ನಡಿಗ" ಪ್ರಶಸ್ತಿ ಪ್ರದಾನ, ಸಾಗರೋತ್ತರ ದೇಶಗಳಲ್ಲಿ ಕನ್ನಡಿಗರು ಉದ್ಯೋಗ ಪಡೆಯಲು ಪ್ರೋತ್ಸಾಹ, ಉನ್ನತ ಶಿಕ್ಷಣ, ಉದ್ಯೋಗಕ್ಕೆ ತೆರಳುವವರಿಗೆ ಪೂರ್ವಭಾವಿ ಮಾರ್ಗದರ್ಶನ, ಅನಿವಾಸಿ ಕನ್ನಡಿಗರು ಎದುರಿಸುತ್ತಿರುವ ಕಾನೂನು ವಿವಾದ, ವಾಣಿಜ್ಯ ವಿವಾದಗಳನ್ನು ತ್ವರಿತವಾಗಿ ಬಗೆಹರಿಸಲು ಕಾನೂನು ಸಲಹೆಗಾರರು ಮತ್ತು ವಕೀಲರ ಮೂಲಕ ನೆರವು ನೀಡುವುದು ಹಾಗೂ ಅನಿವಾಸಿ ಕನ್ನಡಿಗರು ವಿದೇಶದಲ್ಲಿ ಮೃತರಾದರೆ ಸ್ವದೇಶಕ್ಕೆ ಮೃತದೇಹ ಸಾಗಿಸಲು ವಿಮಾನ ವೆಚ್ಚ ಭರಿಸಲು ಈ ನೀತಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ವಿದೇಶದಲ್ಲಿ ನೆಲೆಸಿರುವ ಅನಿವಾಸಿ ಕನ್ನಡಿಗರಿಗೆ ನೂತನ ಅನಿವಾಸಿ ಭಾರತೀಯ ನೀತಿ ಹೊಸ ಆಯಾಮ ನೀಡುವಲ್ಲಿ ಹೆಚ್ಚು ಫಲಕಾರಿಯಾಗಲಿದೆ.

ಸದಸ್ಯ ಕಾರ್ಯದರ್ಶಿ
ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ





# ಕರ್ನಾಟಕ ಸರ್ಕಾರದ ನಡಾವಳಿಗಳು

**ವಿಷಯ : ಕರ್ನಾಟಕದ ಅನಿವಾಸಿ ಭಾರತೀಯ ನೀತಿ**

ಪ್ರಸ್ತಾವನೆ :

ಭಾರತದಿಂದ ವಲಸೆ ಹೋಗಿರುವ ಅನಿವಾಸಿ ಭಾರತೀಯರ ಚರಿತ್ರೆಯ ಮೂಲವು ವಸಾಹತುಶಾಹಿ ಪೂರ್ವ ಕಾಲದಲ್ಲಿದೆ. ಅಂದಿನಿಂದ ಇಂದಿನವರೆಗೂ ವಿಶ್ವದೆಲ್ಲೆಡೆ ಹರಡಿರುವ ಅನಿವಾಸಿ ಭಾರತೀಯರು ಪ್ರಭಾವಿ, ಜಾಗೃತ ಸಮುದಾಯವಾಗಿ ಪರಿವರ್ತನೆಗೊಂಡಿದ್ದಾರೆ. ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ವಿಶ್ವದ ಅತ್ಯಂತ ಯಶಸ್ವಿ ಅನಿವಾಸಿ ಜನಾಂಗವಾಗಿ ನೆಲೆಗೊಂಡಿದ್ದಾರೆ. ಭಾರತೀಯ ಮೂಲದ ಹಲವಾರು ಜನರು ತಾವು ನೆಲೆಸಿರುವ ದೇಶಗಳಲ್ಲಿ ರಾಜಕೀಯದಲ್ಲೂ, ಆಡಳಿತದಲ್ಲೂ ಪ್ರಮುಖ ಸ್ಥಾನಗಳನ್ನಲಂಕರಿಸಿದ್ದಾರೆ.

ಭಾರತದ ಯೋಜನಾ ಆಯೋಗವು ತನ್ನ 12ನೇ ಯೋಜನೆಯ ಚರ್ಚೆಗಳಲ್ಲಿ, ಚೀನಾ ದೇಶದ ಮತ್ತು ಆರ್ಥಿಕ ಸಹಕಾರ ಹಾಗೂ ಅಭಿವೃದ್ಧಿ ಸಂಸ್ಥೆಯ ಸದಸ್ಯ ರಾಷ್ಟ್ರಗಳಿಗಿಂತಲೂ ಬಹಳ ಕಡಿಮೆ ಸರಾಸರಿ ವಯೋಮಾನದ ವಿಶ್ವದ ಅತ್ಯಂತ ಯುವ ಕಾರ್ಮಿಕ ಶಕ್ತಿಯೇ ಭಾರತದ 'ಜನಸಂಖ್ಯಾ ಲಾಭಾಂಶಕ್ಕೆ' ಕಾರಣ ಎಂದು ಹೇಳಿದೆ ಅಲ್ಲದೇ, 2020ರ ವೇಳೆಗೆ ವಿಶ್ವದ ಆರ್ಥಿಕತೆಯು 5.6 ಕೋಟಿಯಷ್ಟು ಕುಶಲಕರ್ಮಿಗಳ ಕೊರತೆಗೆ ಸಾಕ್ಷಿಯಾಗಲಿದೆ ಎಂದು ನಿರೀಕ್ಷಿಸಲಾಗಿದೆಯೆಂದು ಸೂಚಿಸಿದೆ.

ವಿಶ್ವದೆಲ್ಲೆಡೆ ಹರಡಿರುವ ಕನ್ನಡಿಗರು ಹಾಗೂ ಕರ್ನಾಟಕ ರಾಜ್ಯದ ಅನಿವಾಸಿ ಭಾರತೀಯರನ್ನೊಳಗೊಂಡ ಹೊರನಾಡ ಕನ್ನಡಿಗರು-ಹೆಚ್ಚಾಗಿ ಉನ್ನತ ವಿದ್ಯಾಭ್ಯಾಸಕ್ಕಾಗಿಯೋ ಅಥವಾ ಪ್ರಮುಖ ಬಹುರಾಷ್ಟ್ರೀಯ ಸಂಸ್ಥೆಗಳಲ್ಲಿ ನೌಕರಿಗೆಂದೋ ಹೊರದೇಶಗಳಿಗೆ ತೆರಳಿ ಯಶಸ್ವಿ ವೃತ್ತಿಪರ ಉದ್ಯಮಿಗಳಾಗಿ ರೂಪಗೊಂಡಿದ್ದಾರೆ.

ಅನಿವಾಸಿ ಕನ್ನಡಿಗರು ಹಾಗೂ ಭಾರತೀಯ ಮೂಲದ ಅನಿವಾಸಿ ಕನ್ನಡಿಗರ ನಡುವೆ ಸುಮಧುರ ಸಂಬಂಧವನ್ನು ಬೆಸೆಯುವ ಅವಶ್ಯಕತೆಯನ್ನು ಮನಗಂಡ ರಾಜ್ಯ ಸರ್ಕಾರವು ಕರ್ನಾಟಕದ ಅನಿವಾಸಿ ಭಾರತೀಯರ ಸಮಿತಿಯನ್ನು ರಚಿಸಿದೆ. ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೋದ್ಯಮ ಕ್ಷೇತ್ರಗಳಿಗೆ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸುವುದಲ್ಲದೆ, ವಿಶ್ವದೆಲ್ಲೆಡೆ ಹರಡಿರುವ ಕನ್ನಡ ಸಾಂಸ್ಕೃತಿಕ ಸಂಘಟನೆಗಳು ಹಾಗೂ ಅನಿವಾಸಿ ಕನ್ನಡಿಗರ ನಡುವಣ ಸಂಬಂಧವನ್ನು ಬಲಪಡಿಸುವಲ್ಲಿ ಈ ಸಮಿತಿಯು ಪ್ರಮುಖ ಪಾತ್ರ ವಹಿಸುತ್ತದೆ.

ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರೊಂದಿಗೆ ಪರಸ್ಪರ ಲಾಭದಾಯಕ ಸಂಬಂಧವನ್ನು ಬೆಸೆಯುವ ದೇಶ-ನಿರ್ದಿಷ್ಟ ಯೋಜನೆಗಳನ್ನು ಹಮ್ಮಿಕೊಳ್ಳುವುದಲ್ಲದೆ ವಿದೇಶೀ ಉದ್ಯೋಗಾವಕಾಶಗಳು, ಮಾರ್ಗದರ್ಶಕ ಕಾರ್ಯಕ್ರಮಗಳು, ವಿದೇಶ ಪಯಣಿಗರ ದಾಖಲೆಗಳ ದೃಢೀಕರಣ ಇತ್ಯಾದಿಗಳಿಗಿರುವ ಸಹಾಯಲಭ್ಯತೆಗಳ ಬಗ್ಗೆ ಮಾಹಿತಿ ಒದಗಿಸಲು ಏಕ ಗವಾಕ್ಷಿ

ಸೌಲಭ್ಯವನ್ನು ಕರ್ನಾಟಕದಲ್ಲಿ ಎಲ್ಲಾ ಹೊರನಾಡ ಕನ್ನಡಿಗರಿಗೂ ಒದಗಿಸುವುದರಿಂದ ತೊಡಗಿ, ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಹಿತರಕ್ಷಣೆಗೆ ಸಮಗ್ರವಾಗಿ ಗಮನಹರಿಸಬಲ್ಲಂತಹ ನೀತಿಯನ್ನು ತರಬೇಕೆಂದು ಉದ್ದೇಶಿಸಲಾಗಿದೆ.

ಕೌಶಲ್ಯವನ್ನು ವೃದ್ಧಿಸಿಕೊಂಡು ಹೊರದೇಶಗಳ ಕುಶಲಕರ್ಮಿ ಉದ್ಯೋಗಿಗಳ ಕೊರತೆಯನ್ನು ತುಂಬಲು, ಆ ಅವಕಾಶಗಳನ್ನು ಬಳಸಿಕೊಳ್ಳಲು ಕನ್ನಡಿಗರಿಗೆ ಬೆಂಬಲ ನೀಡುವುದು, ತಾವು ನೆಲೆಸಿರುವ ದೇಶಗಳಲ್ಲಿ ಅಸಾಧಾರಣ ಸಾಧನೆ ಮಾಡಿರುವ ಅನಿವಾಸಿ ಭಾರತೀಯರು/ ಅನಿವಾಸಿ ಕನ್ನಡಿಗರು ತಮ್ಮ ಜ್ಞಾನ, ಶಕ್ತಿ, ಸಾಮರ್ಥ್ಯಗಳನ್ನು ಭಾರತ/ ಕರ್ನಾಟಕದ ಅಭಿವೃದ್ಧಿಗಾಗಿ ಕೊಡುಗೆ ನೀಡಲು, ಈ ನೀತಿಯಲ್ಲಿ ಅವಕಾಶ ಕಲ್ಪಿಸಿದೆ, ಅಲ್ಲದೆ ಹೊರದೇಶಗಳಲ್ಲಿ ವಾಸವಾಗಿರುವ ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಹಿತರಕ್ಷಣೆ ಕಡೆಗೂ ಗಮನ ಹರಿಸಲುದ್ದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕದ ಅನಿವಾಸಿ ಭಾರತೀಯರ ನೀತಿಯನ್ನು ರೂಪಿಸಲು ಸರ್ಕಾರವು ನಿರ್ಧರಿಸಿ. ಈ ಕೆಳಗಿನ ಆಜ್ಞೆ ಹೊರಡಿಸಲಾಗಿದೆ:

**ಸರ್ಕಾರಿ ಆದೇಶ ಸಂಖ್ಯೆ : ಸಿ.ಐ. 207 ಎಸ್.ಪಿ.ಐ. 2016 ದಿ:02.12.2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭದಲ್ಲಿ ಈ ಆಜ್ಞೆಯ ಅನುಬಂಧದಲ್ಲಿ ತಿಳಿಸಿರುವಂತೆ ಕರ್ನಾಟಕದ ಅನಿವಾಸಿ ಭಾರತೀಯರ ನೀತಿಯನ್ನು ಪ್ರಕಟಿಸಲು ಸರ್ಕಾರವು ಹರ್ಷಿಸುತ್ತದೆ.

ಈ ನೀತಿಯು 02.12.2016ರಿಂದ ಜಾರಿಗೆ ಬರುತ್ತದೆ ಮತ್ತು ಐದು ವರ್ಷಗಳವರೆಗೆ ಅಥವ ಹೊಸ ನೀತಿಯು ಪ್ರಕಟಗೊಳ್ಳುವವರೆಗೆ ಚಾಲ್ತಿಯಲ್ಲಿರುತ್ತದೆ.

ಈ ಆಜ್ಞೆಯನ್ನು ಹಣಕಾಸು ಇಲಾಖೆಯ ಅನುಮೋದನೆಯೊಂದಿಗೆ, ಕರ್ನಾಟಕದ ಅನಿವಾಸಿ ಭಾರತೀಯರ ಸಮಿತಿಯ ಪತ್ರ ದಿ:08.08.2016/28.10.2016, ಕಾರ್ಮಿಕರ ಇಲಾಖೆಯ ಅಡಿ ಟಿಪ್ಪಣಿ ಸಂಖ್ಯೆ: ಎಲ್.ಡಿ.374/ಇ.ಟಿ.ಐ./2016 ದಿ:04.11.2016, ಪ್ರವಾಸೋದ್ಯಮ ಇಲಾಖೆಯ ಅಡಿ ಟಿಪ್ಪಣಿ ಸಂಖ್ಯೆ: ಟಿ.ಡಿ./242/ಪ್ರವಾಯೋ/2016 ದಿ:26.10.2016, ಐ.ಟಿ./ಬಿ.ಟಿ./ಎಸ್. & ಟಿ. ಇಲಾಖೆಯ ಅಡಿ ಟಿಪ್ಪಣಿ ಸಂಖ್ಯೆ: ಐ.ಟಿ.ಡಿ./10/ಪಿ.ಆರ್.ಎಂ./2016 ದಿ:26.09.2016, ಗೃಹ ಇಲಾಖೆಯ ಅಡಿ ಟಿಪ್ಪಣಿ ಸಂಖ್ಯೆ: ಎಚ್.ಡಿ./535/ಪಿ.ಎಂ.ಎಸ್./2016 ದಿ:24.08.2016, ಡಿ.ಪಿ.ಎ.ಆರ್.(ಎ.ಆರ್.) ಇಲಾಖೆಯ ಅಡಿ ಟಿಪ್ಪಣಿ ಸಂಖ್ಯೆ: ಡಿ.ಪಿ.ಎ.ಆರ್./137/ಇ.ಎ.ಎಸ್.ಯು./2016 ದಿ:03.11.2016 ಮತ್ತು ಸಂಪುಟ ಅನುಮೋದನೆ

ದಿ:23.11.2016ರೊಡನೆ ಹೊರಡಿಸಲಾಗಿದೆ.

**ಕರ್ನಾಟಕದ ರಾಜ್ಯಪಾಲರ**
**ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ**

**(ಡಿ.ವಿ.ಪ್ರಸಾದ್)**
**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,**
**ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ**





ಸರ್ಕಾರಿ ಆದೇಶ ಸಂಖ್ಯೆ : ಸಿ.ಐ. 207 ಎಸ್.ಪಿ.ಐ. 2018 ದಿ:02.12.2016 ರ ಅನುಬಂಧ

## ಕರ್ನಾಟಕದ ಅನಿವಾಸಿ ಭಾರತೀಯರ ನೀತಿ

### 1. ಪ್ರಸ್ತಾವನೆ:

ವಿಶ್ವದ 185 ದೇಶಗಳಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರು ಇಡೀ ಪ್ರಪಂಚದಲ್ಲೇ ಎರಡನೇ ಬೃಹತ್ ಅನಿವಾಸಿ ಜನಾಂಗವಾಗಿದ್ದಾರೆ. 2015ರ ವೇಳೆಗೆ ವಿಶ್ವದೆಲ್ಲೆಡೆ ಸುಮಾರು 2.84 ಕೋಟಿ ಅನಿವಾಸಿ ಭಾರತೀಯರು ವಿದೇಶಗಳಲ್ಲಿ ನೆಲೆಸಿದ್ದರೆಂದು ವಿದೇಶಾಂಗ ಸಚಿವಾಲಯವು (ಹಿಂದೆ ಸಾಗರೋತ್ತರ ಭಾರತೀಯ ವ್ಯವಹಾರ ಸಚಿವಾಲಯ) ಅಂದಾಜಿಸಿದೆ. ಇದು 1.13 ಕೋಟಿ ಭಾರತ ಮೂಲದ ವಿದೇಶೀಯರನ್ನೂ, 1.71 ಕೋಟಿ ಅನಿವಾಸಿ ಭಾರತೀಯರನ್ನೂ ಒಳಗೊಂಡಿದೆ. ಮೇಲೆ ಹೇಳಿದ 2015ರ ಅಂದಾಜಿನಂತೆ ಅತಿ ಹೆಚ್ಚು ಸಾಗರೋತ್ತರ ಭಾರತೀಯ ಸಮುದಾಯವನ್ನು ಹೊಂದಿರುವ ವಿಶ್ವದ ಮೊದಲ 15 ದೇಶಗಳೆಂದರೆ (ಇಳಿಕೆಯ ಶ್ರೇಣಿಯಲ್ಲಿ) ಅಮೆರಿಕ, ಸೌದಿ ಅರೇಬಿಯಾ, ಮಲೇಷಿಯಾ, ಮ್ಯಾನ್ಮಾರ್, ಯುನೈಟೆಡ್ ಅರಬ್ ಎಮಿರೇಟ್ಸ್, ಇಂಗ್ಲೆಂಡ್, ಶ್ರೀಲಂಕಾ, ದಕ್ಷಿಣ ಆಫ್ರಿಕ, ಕೆನಡ, ಮಾರಿಷಸ್, ಕುವೈತ್, ಓಮನ್, ಸಿಂಗಾಪುರ, ಕತಾರ್ ಮತ್ತು ನೇಪಾಳ.

ಅನಿವಾಸಿ ಭಾರತೀಯ ಚರಿತ್ರೆಯು ಬ್ರಿಟಿಷ್ ವಸಾಹತುಶಾಹಿ ಕಾಲಕ್ಕಿಂತಲೂ ಹಿಂದಿನದ್ದಾಗಿದೆ. ಆದರೂ, ಪ್ರಸ್ತುತದ ಅನಿವಾಸಿ ಭಾರತೀಯ ಜನಾಂಗವು ಭಾರತದ ಬ್ರಿಟಿಷ್ ವಸಾಹತು ಕಾಲದ ಹಾಗೂ ಸ್ವಾತಂತ್ರ್ಯೋತ್ತರ ಭಾರತದ ಕಾಲದ ಅನಿವಾಸಿಗರ ಪರಿಣಾಮವಾಗಿದೆ. ಕರಾರು ಪತ್ರ ಹಾಗೂ ಅಗ್ಗದ ಟೀ ಮತ್ತು ರಬ್ಬರ್ ಪ್ಲಾಂಟೇಷನ್ ಕಾರ್ಮಿಕರ ವಲಸೆಗಳಾದ 'ಕಂಗನಿ ಪದ್ಧತಿ', ಮೇಸ್ತ್ರಿ ಪದ್ಧತಿ, ಮುಕ್ತ ಪ್ರಯಾಣ ವಲಸೆ, ಪಾಶ್ಚಿಮಾತ್ಯ ಹಾಗೂ ಗಲ್ಫ್ ದೇಶಗಳಿಗೆ ವಲಸೆ ಮುಂತಾದವುಗಳು ಬರಹ ರೂಪದಲ್ಲಿಯೇ ದಾಖಲಾಗಿವೆ. ಕಾಲಕ್ರಮೇಣ ಆ ಅನಿವಾಸಿ ಭಾರತೀಯರು ಆಯಾ ದೇಶಗಳಲ್ಲಿ ಪ್ರಭಾವೀ ಜಾಗತಿಕ ಸಮುದಾಯವಾಗಿ ಪರಿವರ್ತನೆಗೊಂಡರು. ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ವಿಶ್ವದ ಅತ್ಯಂತ ಯಶಸ್ವಿ ಅನಿವಾಸಿ ಜನಾಂಗವಾಗಿ ನೆಲೆಗೊಂಡಿದ್ದಾರಲ್ಲದೆ. ಭಾರತೀಯ ಮೂಲದ ಹಲವಾರು ಮಂದಿ ತಾವು ನೆಲೆಸಿರುವ ದೇಶಗಳಲ್ಲಿ ರಾಜಕೀಯದಲ್ಲೂ, ಆಡಳಿತದಲ್ಲೂ ಪ್ರಮುಖ ಸ್ಥಾನಗಳನ್ನಲಂಕರಿಸಿದ್ದಾರೆ. ವಿಶ್ವದೆಲ್ಲೆಡೆ ನೆಲೆಸಿರುವ ಕನ್ನಡಿಗರು ಹಾಗೂ ಕರ್ನಾಟಕ ರಾಜ್ಯದ ಅನಿವಾಸಿ ಭಾರತೀಯರನ್ನೊಳಗೊಂಡ ಹೊರನಾಡ ಕನ್ನಡಿಗರಲ್ಲಿ ಹೆಚ್ಚಿನವರು-ಹೆಚ್ಚಾಗಿ ಉನ್ನತ ವಿದ್ಯಾಭ್ಯಾಸಕ್ಕಾಗಿಯೋ ಅಥವ ಪ್ರಮುಖ ಬಹುರಾಷ್ಟ್ರೀಯ ಸಂಸ್ಥೆಗಳಲ್ಲಿ ನೌಕರಿಗೆಂದೋ ಹೊರದೇಶಗಳಿಗೆ ತೆರಳಿ ಯಶಸ್ವಿ ವೃತ್ತಿಪರ ಉದ್ಯಮಿಗಳಾಗಿ ಬೆಳೆದಿದ್ದಾರೆ.

2004ರ ನಂತರದಲ್ಲಿ – ಭಾರತ ಸರ್ಕಾರವು ಸಾಗರೋತ್ತರ ಭಾರತೀಯರ ವ್ಯವಹಾರ ಸಚಿವಾಲಯವನ್ನು ಪ್ರತ್ಯೇಕವಾಗಿ ರಚಿಸಿದ ಮೇಲೆ – ಹಲವಾರು ಭಾರತೀಯ ರಾಜ್ಯ ಸರ್ಕಾರಗಳು ದೇಶ-ನಿರ್ದಿಷ್ಟ ಸಾಂಸ್ಥಿಕ ರಚನೆಗಳ ಮೂಲಕ ತಮ್ಮತಮ್ಮ ಅವದಿಯಲ್ಲಿ ಅನಿವಾಸಿ ಗುಜರಾತಿ ಸಂಸ್ಥೆ(ಗುಜರಾತ್), ಬಿಹಾರ ಅನಿವಾಸಿಗಳ ಸಂಸ್ಥೆ(ಬಿಹಾರ) ಇತ್ಯಾದಿಗಳಂತಹವನ್ನು ಸ್ಥಾಪಿಸಿದರೆ, ಇತರ ರಾಜ್ಯಗಳು ಸಾಗರೋತ್ತರ ಭಾರತೀಯರನ್ನು, ವಿಶೇಷವಾಗಿ ತಮ್ಮತಮ್ಮ ರಾಜ್ಯಗಳಲ್ಲಿ ಮೂಲ ನೆಲೆ ಹೊಂದಿದವರನ್ನು, ಪ್ರೋತ್ಸಾಹಿಸಲು ಪೂರ್ಣ ಪ್ರಮಾಣದ ಸರ್ಕಾರಿ ಇಲಾಖೆಗಳನ್ನೇ

ಸ್ಥಾಪಿಸಿದವು (ಉತ್ತರ ಪ್ರದೇಶದ ಅನಿವಾಸಿ ಭಾರತೀಯರ ಇಲಾಖೆ, ಪಂಜಾಬಿನ ಅನಿವಾಸಿ ಭಾರತೀಯರ ವ್ಯವಹಾರ ಇಲಾಖೆ ಇತ್ಯಾದಿ).

ಕರ್ನಾಟಕವು ವಿಸ್ತಾರದಲ್ಲಿ ಭಾರತದ ಏಳನೇ ಹಾಗೂ ಜನಸಂಖ್ಯೆಯಲ್ಲಿ ಎಂಟನೇ ಅತಿ ದೊಡ್ಡ ರಾಜ್ಯವಾಗಿದೆ. ಈ ರಾಜ್ಯದ ಜನತೆ – ಕನ್ನಡಿಗರು – ವಿಶ್ವಾದ್ಯಂತ ಕರ್ನಾಟಕವನ್ನು ಪ್ರತಿನಿಧಿಸುತ್ತಾರೆ ಹಾಗೂ ಅವರು ತಮ್ಮ ಉನ್ನತ ಕೌಶಲ್ಯಗಳಿಗೆ ಮತ್ತು ತಾವು ಎಲ್ಲಿ ವಾಸವಾಗಿರುತ್ತಾರೋ ಆ ದೇಶಗಳ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡುವಲ್ಲಿ ಯಶಸ್ವಿಯಾಗಿದ್ದಾರೆ.

ಅನಿವಾಸಿ ಭಾರತೀಯರು ವಾಸಿಸುವ ದೇಶಗಳ ಸಮಾಜಕ್ಕೆ ಮಾಡುತ್ತಿರುವ ಪ್ರಮುಖ ಕೊಡುಗೆಗಳಿಂದ ಅನಿವಾಸಿ ಭಾರತೀಯರು ಹಾಗೂ ಭಾರತ ಮೂಲದವರು, ವಿಶೇಷವಾಗಿ ಅನಿವಾಸಿ ಕನ್ನಡಿಗರು, ಭಾರತದ/ ಕರ್ನಾಟಕದ ಅಭಿವೃದ್ಧಿಗೆ ಕೊಡುಗೆ ನೀಡಿರುವುದಲ್ಲದೆ, ಭಾರತ/ ಕರ್ನಾಟಕಗಳ ಹಾಗೂ ಆಯಾ ದೇಶಗಳ ನಡುವಣ ಸಂಬಂಧಗಳನ್ನು ಬಲಗೊಳಿಸುವಲ್ಲಿ, ತಾವಿರುವ ಸ್ಥಾನಬಲದಿಂದ ಇನ್ನೂ ಹೆಚ್ಚಿನ ಪ್ರಗತಿಪರ ಪಾತ್ರ ವಹಿಸಬಹುದಾಗಿದೆ. ಕರ್ನಾಟಕವನ್ನು ಕೇಂದ್ರೀಕರಿಸಿ, ಭಾರತದೊಡನೆ ಅವರ ಸಂಪರ್ಕವನ್ನು ವೃದ್ಧಿಸುವಂತೆ ಮಾಡುವ ಭಾರತ ಸರ್ಕಾರದ ಪ್ರಯತ್ನಗಳಿಗೆ ಪೂರಕವಾಗಿ ನೆರವಾಗುವಂತೆ, ವಿದೇಶಗಳಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಹಿತರಕ್ಷಣೆ ಕಡೆಗೆ ಗಮನವೀಯುವ ಅವಶ್ಯಕತೆ ಕೂಡಾ ಇದೆ.

ಕರ್ನಾಟಕ ಹಾಗೂ ಭಾರತೀಯ ಮೂಲದ ಅನಿವಾಸಿ ಕನ್ನಡಿಗರ ನಡುವೆ ಸಮನ್ವಯತೆಯನ್ನೇರ್ಪಡಿಸುವ ಅವಶ್ಯಕತೆಯನ್ನು ಮನಗಂಡಿರುವ ರಾಜ್ಯ ಸರ್ಕಾರವು ಕರ್ನಾಟಕ ಅನಿವಾಸಿ ಭಾರತೀಯರ ಸಮಿತಿಯನ್ನು ಸ್ಥಾಪಿಸಿದೆ. ವಿದೇಶಗಳಲ್ಲಿ ನೆಲೆಸಿರುವ ಅನಿವಾಸಿ ಕನ್ನಡಿಗರು ರಾಜ್ಯದ ಅಭಿವೃದ್ಧಿ ಕ್ಷೇತ್ರಗಳಿಗೆ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸುವುದಲ್ಲದೆ, ಅವರ ಮತ್ತು ವಿಶ್ವದೆಲ್ಲೆಡೆ ಇರುವ ಹಲವಾರು ಸಾಂಸ್ಕೃತಿಕ ಸಂಸ್ಥೆಗಳ ನಡುವಣ ಸಂಬಂಧವನ್ನು ಗಟ್ಟಿಗೊಳಿಸುವಲ್ಲಿ ಈ ಸಂಸ್ಥೆಯು ಅತ್ಯಂತ ಪ್ರಮುಖ ಪಾತ್ರ ವಹಿಸಿದೆ.

ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಆಕಾಂಕ್ಷೆಗಳು, ಅವಶ್ಯಕತೆಗಳು ಮತ್ತು ನಿರೀಕ್ಷೆಗಳು ಅನಿವಾಸಿ ಭಾರತೀಯರೊಂದಿಗೆ/ ಅನಿವಾಸಿ ಕನ್ನಡಿಗರೊಂದಿಗೆ ಪರಸ್ಪರ ಸಹಕಾರ, ಸಂಬಂಧಗಳನ್ನು ಬೆಸೆಯುವಂತಹ ನಿರ್ದಿಷ್ಟ ಯೋಜನೆಗಳಲ್ಲದೆ, ಕರ್ನಾಟಕದ ಆರ್ಥಿಕ, ಸಾಮಾಜಿಕ ಮತ್ತು ತಾಂತ್ರಿಕ ಅಭಿವೃದ್ಧಿಯಲ್ಲಿ ಅವರ ಪಾತ್ರ, ಅವರ ಯಾವುದೇ ವಿವಾದಗಳು/ ಸಮಸ್ಯೆಗಳು ಇದ್ದಲ್ಲಿ ಅವುಗಳನ್ನು ಪರಿಹರಿಸಲು ತೆಗೆದುಕೊಳ್ಳಬೇಕಾದ ಸೂಕ್ತ ಕ್ರಮಗಳ ಕಡೆಗೆ ಸಮಗ್ರವಾಗಿ ಗಮನ ಹರಿಸುವಂತಹ ಅನಿವಾಸಿ ನೀತಿಯನ್ನು ರೂಪಿಸಲು ಕರ್ನಾಟಕ ಸರ್ಕಾರವು ಉದ್ದೇಶಿಸಿದೆ.

## 2. ದೃಷ್ಟಿಕೋನ:

ಪ್ರಗತಿಪರವಾದ, ಪ್ರತಿಸ್ಪಂದಿಸುವ ಮತ್ತು ಸಂಪದ್ಭರಿತ ಕರ್ನಾಟಕವನ್ನು ಕಟ್ಟಲು ಕರ್ನಾಟಕ ಸರ್ಕಾರ ಹಾಗೂ ವಿಶ್ವದೆಲ್ಲೆಡೆಯ ಅನಿವಾಸಿ ಕನ್ನಡಿಗರ ನಡುವೆ ಸುಸ್ಥಿರ ಸಂಬಂಧವನ್ನು ಬೆಸೆಯುವ ಕ್ರಿಯಾವರ್ಧಕದ ಪಾತ್ರ ವಹಿಸುವುದು.





## 3. ಗುರಿ:

- ವಿಶ್ವದೆಲ್ಲೆಡೆಯ ಅನಿವಾಸಿ ಭಾರತೀಯರು/ ಅನಿವಾಸಿ ಕನ್ನಡಿಗರ ಸಮುದಾಯದ ಆಕಾಂಕ್ಷೆಗಳು, ಅವಶ್ಯಕತೆಗಳು ಮತ್ತು ನಿರೀಕ್ಷೆಗಳೆಡೆಗೆ ಗಮನ ನೀಡುವುದು ಮತ್ತು ಅವರನ್ನು ಮೂಲ ನೆಲೆಯ ಸನಿಹಕ್ಕೆ ತರುವುದು.
- ಸಾಧಕ ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಸಮುದಾಯದ ಅಂತಹ ಸಾಮರ್ಥ್ಯದ ಸಮಗ್ರ ಬಳಕೆ.
- ಹೂಡಿಕೆ, ವ್ಯವಹಾರ/ ವಹಿವಾಟು, ತಂತ್ರಜ್ಞಾನ ವರ್ಗಾವಣೆ, ಸಂಶೋಧನೆ ಮತ್ತು ಅಭಿವೃದ್ಧಿ ಇತ್ಯಾದಿ ಕ್ಷೇತ್ರಗಳಲ್ಲಿ ಅನಿವಾಸಿ ಭಾರತೀಯರಿಗೆ/ ಅನಿವಾಸಿ ಕನ್ನಡಿಗರಿಗೆ ಸೌಲಭ್ಯಗಳನ್ನೊದಗಿಸುವುದು.
- ಬೆಂಗಳೂರು/ ಕರ್ನಾಟಕವನ್ನು ಬ್ರಾಂಡ್ ಆಗಿ ರೂಪಿಸಲು ಉತ್ತೇಜಿಸುವುದು.
- ಮೇಲಿನ ಗುರಿಗಳನ್ನು ಸಾಧಿಸಲು ಪರಿಣಾಮಕಾರಿ ವಿಧಾನಗಳು ಹಾಗೂ ಯೋಜನೆಗಳನ್ನು ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು.

## 4. ಉದ್ದೇಶಗಳು:

- ಅನಿವಾಸಿ ಭಾರತೀಯರೊಡನೆ/ ಅನಿವಾಸಿ ಕನ್ನಡಿಗರೊಡನೆ ಸುಸ್ಥಿರ ಸಂಪರ್ಕ ಸಾಧಿಸಿ, ಅವರ ಅವಶ್ಯಕತೆಗಳು ಹಾಗೂ ಸಮಸ್ಯೆಗಳನ್ನು ಪರಿಶೀಲಿಸುವುದು.
- ಸರ್ಕಾರದ ನೀತಿಗಳೊಂದಿಗೆ ಅಪರಿಮಿತ ತಾಂತ್ರಿಕ, ನಿರ್ವಹಣಾ ಮತ್ತು ಇತರ ಕೌಶಲ್ಯಗಳನ್ನು/ ಸೌಲಭ್ಯಗಳನ್ನು ಬಳಸಿಕೊಂಡು ಕರ್ನಾಟಕದ ಅಭಿವೃದ್ಧಿ ಸಾಧಿಸುವುದು.
- ಪರಸ್ಪರರ ಪ್ರಯೋಜನಕ್ಕಾಗಿ ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಹೂಡಿಕೆ ಪ್ರಸ್ತಾವನೆಗಳನ್ನು ಕರ್ನಾಟಕಕ್ಕೆ ಬರುವಂತೆ ಅನುವು ಮಾಡಿಕೊಡುವಂತಹ ವಾತಾವರಣ ನಿರ್ಮಿಸಲು ನೆರವು ನೀಡುವುದು.
- ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಸಾಮಾನ್ಯ ಹಿತರಕ್ಷಣೆಯ ದೃಷ್ಟಿಯಿಂದ ಒಂದು ಸಾಂಸ್ಥಿಕ ಸಂಸ್ಥೆಯನ್ನು ಸೃಜಿಸುವುದು.
- ತುರ್ತು ಸಮಯಗಳಲ್ಲಿ ರಾಜ್ಯ ಸರ್ಕಾರದ ಕಾರ್ಯನಿರ್ವಾಹಕ ಅಧಿಕಾರಿಗಳೊಡನೆ ಮತ್ತು ಭಾರತ ಸರ್ಕಾರದೊಡನೆ ಚರ್ಚಿಸಿ ಸಮಸ್ಯೆಗಳನ್ನು ಗುರುತಿಸಿ, ನಿವಾರಿಸುವುದು.

## 5. ಮಾರ್ಗೋಪಾಯಗಳು:

- ಅನಿವಾಸಿ ಭಾರತೀಯರು/ ಅನಿವಾಸಿ ಕನ್ನಡಿಗರ ಸಾಮಾನ್ಯ ಹಿತರಕ್ಷಣೆಗಾಗಿ ಮತ್ತು ರಾಜ್ಯದ ಸಾಮಾಜಿಕ–ಆರ್ಥಿಕ ಅಭಿವೃದ್ಧಿಗಾಗಿ ವ್ಯವಸ್ಥೆಯನ್ನು ರಚಿಸುವುದು.
- ಅನಿವಾಸಿ ಕನ್ನಡಿಗರು ಹಾಗೂ ಸಂಸ್ಥೆಗಳೊಂದಿಗೆ ಸಂಪರ್ಕ ಸಾಧಿಸುವುದು.
- ಅನಿವಾಸಿ ಭಾರತೀಯರನ್ನು/ ಅನಿವಾಸಿ ಕನ್ನಡಿಗರನ್ನು ಒಟ್ಟಿಗೆ ಸಮನ್ವಯಗೊಳಿಸುವುದು ಮತ್ತು ಅವರನ್ನು ಸಾಮಾಜಿಕ ಹಾಗೂ ಅಭಿವೃದ್ಧಿ ಯೋಜನೆಗಳಲ್ಲಿ ತೊಡಗಿಸುವುದು.

- ವಿಶ್ವದೆಲ್ಲೆಡೆ ಇರುವ ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಸಂಸ್ಥೆಗಳನ್ನು ಒಟ್ಟಿಗೆ ಸಮನ್ವಯಗೊಳಿಸುವುದು.
- ಅನಿವಾಸಿ ಭಾರತೀಯರು/ ಅನಿವಾಸಿ ಕನ್ನಡಿಗರು ಕರ್ನಾಟಕದಲ್ಲಿ ಹೂಡಿಕೆ ಮಾಡುವುದನ್ನು ಸುಗಮಗೊಳಿಸುವುದು.
- ಅನಿವಾಸಿ ಕನ್ನಡಿಗರಿಂದ ಜ್ಞಾನ/ ತಂತ್ರಜ್ಞಾನ ವರ್ಗಾವಣೆಗೆ ಸೌಲಭ್ಯಗಳನ್ನೊದಗಿಸುವುದು.
- ಅನಿವಾಸಿ ಭಾರತೀಯರು/ ಅನಿವಾಸಿ ಕನ್ನಡಿಗರ ಸಾಮಾನ್ಯ ಹಿತರಕ್ಷಣಾ ಸಮಸ್ಯೆಗಳಿಗೆ ಪರಿಹಾರ ಸೌಲಭ್ಯಗಳನ್ನೊದಗಿಸುವುದು.

## 6. ನೀತಿಯ ಉಪಕ್ರಮಗಳು:

### 6.1. ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಹಿತರಕ್ಷಣೆಗಾಗಿ ಮತ್ತು ರಾಜ್ಯದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗಾಗಿ ವ್ಯವಸ್ಥೆಯನ್ನು ಸೃಜಿಸುವುದು.

#### 6.1.1. ರಾಜ್ಯದಲ್ಲಿ ಅನಿವಾಸಿ ಭಾರತೀಯ ಸಮಿತಿಯನ್ನು ಬಲಗೊಳಿಸುವುದು.

ಕರ್ನಾಟಕ ರಾಜ್ಯದ ಸಾಮಾಜಿಕ-ಆರ್ಥಿಕ ಚಟುವಟಿಕೆಗಳ ಮತ್ತು ಅಭಿವೃದ್ಧಿಯ ಮಾಹಿತಿಯನ್ನು ಒದಗಿಸುವುದು ಮತ್ತು ರಾಜ್ಯದ; ಸಾಧ್ಯವಿರುವ ಎಲ್ಲಾ ವಲಯಗಳಲ್ಲೂ ಹೂಡಿಕೆಯನ್ನು ಸಮನ್ವಯಗೊಳಿಸುವುದು. ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಅವಶ್ಯಕತೆಗಳ ಆಳವಾದ ತಿಳಿವಳಿಕೆ ಇರುವಂತಹ ಹಲವಾರು ಕ್ಷೇತ್ರಗಳ ತಜ್ಞ ಅನುಭವಿಗಳ ಪ್ರತಿನಿಧಿಗಳನ್ನು ಒಳಗೊಳ್ಳುವ ಮೂಲಕ ಅನಿವಾಸಿ ಭಾರತೀಯರ ಸಮಿತಿಯ ಆಧಾರವನ್ನು ವಿಶಾಲಗೊಳಿಸುವುದು ಮತ್ತು ಕರ್ನಾಟಕದ ಅಭಿವೃದ್ಧಿಯೊಂದಿಗೆ ಸಾಹಿತ್ಯ, ಸಂಸ್ಕೃತಿ ಹಾಗೂ ಸಾಂಪ್ರದಾಯಿಕ ಉತ್ಸವಾಚರಣೆಗಳ ಸಾಗರೋತ್ತರ ಪ್ರಯೋಜನೆ ಮತ್ತು ವಿಶ್ವದೆಲ್ಲೆಡೆಯ ಅನಿವಾಸಿ ಕನ್ನಡಿಗರ ಜ್ಞಾನ ಸಂಗ್ರಹದ ನಕಾಶೆಯನ್ನು ರಚಿಸುವುದು.

ಹೂಡಿಕೆ ನಿಧಿ ಸಂಗ್ರಹಣೆ, ಸ್ವತ್ತುಗಳ ಕೊಳ್ಳಾಟ ಮತ್ತು ಮಾರಾಟ, ಸಮಸ್ಯೆಗಳಿಗೆ ಪರಿಹಾರ, ದೂರುಗಳ ನೋಂದಣಿ ಇತ್ಯಾದಿಗಳಿಗೆ ಸಂಬಂಧಿಸಿದ ಹಲವಾರು ಸಲಹಾ ಸೇವೆಗಳನ್ನೊದಗಿಸಲು ಪ್ರತ್ಯೇಕ ಸಹಾಯವಾಣಿಯನ್ನು ರಚಿಸುವುದು.

ಅನಿವಾಸಿ ಭಾರತೀಯರಿಗೆ/ ಅನಿವಾಸಿ ಕನ್ನಡಿಗರಿಗೆ ಏಕಗವಾಕ್ಷಿ ಸಹಾಯದಂತೆ ಹಾಗೂ ಮೂಲ ಸೌಕರ್ಯ, ಶಿಕ್ಷಣ, ಆರೋಗ್ಯ ಮತ್ತಿತರ ಪರಸ್ಪರ ಆಸಕ್ತಿಕರ ಕ್ಷೇತ್ರಗಳ ಅಭಿವೃದ್ಧಿಯಲ್ಲಿ ಸಹಕಾರವನ್ನು ವರ್ಧಿಸಲು ರಾಜ್ಯ ಹಾಗೂ ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ/ ಭಾರತ ಮೂಲದ ಇತರ ಜನರ/ ವಿದೇಶಗಳಲ್ಲಿರುವ ಅವರ ಸಂಸ್ಥೆಗಳ ನಡುವೆ ಸೇತುವೆಯಂತೆ ಈ ಸಂಸ್ಥೆಯು ಕಾರ್ಯನಿರ್ವಹಿಸಲಿದೆ.

#### 6.1.2. ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಹಿತರಕ್ಷಣಾ ಸಮಿತಿಗಳು.

ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ವಿವಿಧ ಸಮಸ್ಯೆಗಳ ಪರಿಹಾರಕ್ಕೆ ಇತರ ಸದಸ್ಯರೊಂದಿಗೆ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಅನಿವಾಸಿ





ಭಾರತೀಯರ ಸಮಿತಿಯು ಈಗಾಗಲೇ ಅಸ್ತಿತ್ವದಲ್ಲಿದೆ (ಸರ್ಕಾರಿ ಆದೇಶ ಸಂಖ್ಯೆ: ಡಿ.ಪಿ.ಎ.ಆರ್./68/ಶಿಸಾನೇ/2008, ಬೆಂಗಳೂರು, ದಿ:05.08.2008).

ಜಿಲ್ಲಾಮಟ್ಟದಲ್ಲಿ ಆಯಾ ಜಿಲ್ಲೆಯ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಹಾಗೂ ತಹಶೀಲ್ದಾರರು ಸದಸ್ಯರಾಗಿದ್ದು, ಜಿಲ್ಲಾ ಕೇಂದ್ರ ಸ್ಥಾನದ ಉಪವಿಭಾಗಾಧಿಕಾರಿ ಸಂಚಾಲಕತ್ವದಲ್ಲಿ ಜಿಲ್ಲಾ ಮಟ್ಟದ ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಹಿತರಕ್ಷಣಾ ಸಮಿತಿಗಳನ್ನು ರಚಿಸಲು ಉದ್ದೇಶಿಸಲಾಗಿದೆ. ಈ ಜಿಲ್ಲಾ ಮಟ್ಟದ ಸಮಿತಿಯು ರಾಜ್ಯ ಮಟ್ಟದ ಸಮಿತಿಯೊಡನೆ ಸಹಕರಿಸಿ, ಬೆಂಬಲಿಸುತ್ತದೆ.

### 6.2. ಅನಿವಾಸಿ ಕನ್ನಡಿಗರು ಮತ್ತು ಕನ್ನಡ ಸಂಘಟನೆಗಳೊಂದಿಗೆ ಸಂಪರ್ಕ ಸಾಧಿಸುವುದು.

#### 6.2.1. ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಆಧಾರ ದತ್ತಾಂಶ ರಚನೆ.

ವಿಶ್ವದೆಲ್ಲೆಡೆಯ ಅನಿವಾಸಿ ಭಾರತೀಯ/ ಅನಿವಾಸಿ ಕನ್ನಡಿಗರ ಹಾಗೂ ಅವರ ಸಂಘ, ಸಂಸ್ಥೆಗಳ ಒಂದು ಸಮಗ್ರ ಆಧಾರ ದತ್ತಾಂಶ ರಚನೆಯನ್ನು ಹೊಂದಿರುವಂತಹ 'ಕ್ಲೌಡ್' ಆಧರಿತ ಅಂತರ್ಕ್ರಿಯಾತ್ಮಕ ಅಂತರ್ಜಾಲ ತಾಣವನ್ನು ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ನಡುವೆ ಪರಿಣಾಮಕಾರೀ ಸಂವಹನಕ್ಕಾಗಿ ಅಭಿವೃದ್ಧಿ ಪಡಿಸಲಾಗುವುದು.

ಇತರ ಸದಸ್ಯರೊಂದಿಗೆ ಸಂಪರ್ಕ ಹೊಂದಲು ನೋಂದಾಯಿತ ಅನಿವಾಸಿ ಭಾರತೀಯ/ ಅನಿವಾಸಿ ಕನ್ನಡಿಗ ಸದಸ್ಯರ ಇ-ನಿರ್ದೇಶಿಕೆಯನ್ನು, ಪಾಲುಗಾರಿಕೆಯ ಗ್ಯಾಲರಿ, ವಿಡಿಯೋ ಮತ್ತು ಕಾರ್ಯಕ್ರಮಗಳೊಡನೆ ಅಂತರ್ಜಾಲದಲ್ಲಿ ಒದಗಿಸಲಾಗುವುದು.

ಅಭಿಪ್ರಾಯ, ಸಮಸ್ಯೆ ಅನುಭವ ಇತ್ಯಾದಿಗಳನ್ನು ಕ್ಷಿಪ್ರವಾಗಿ(online) ಹಂಚಿಕೊಳ್ಳಲು ಅನುವಾಗುವಂತೆ, ಅನಿವಾಸಿ ಭಾರತೀಯ/ ಅನಿವಾಸಿ ಕನ್ನಡಿಗರು ಬಳಸುವ ಎಲ್ಲಾ ಸಾಮಾಜಿಕ ಮಾಧ್ಯಮಗಳಾದ ಟ್ವಿಟರ್, ಫೇಸ್‌ಬುಕ್, ಇನ್ಸ್ಟಾಗ್ರಾಂ, ಲಿಂಕ್ಡಿನ್ ಮೊದಲಾದವುಗಳಲ್ಲಿ ಸಂಪರ್ಕ ಜಾಲಕ್ಕೊಳಪಡಿಸಲಾಗುವುದು.

#### 6.2.2. ಅನಿವಾಸಿ ಕನ್ನಡಿಗರ ಕಾರ್ಡು

ಪ್ರತಿ ಕನ್ನಡಿಗನೂ ತನ್ನ ಮೂಲ ನೆಲೆಯೊಂದಿಗೆ ಸಂಪರ್ಕ ಹೊಂದುವ ದೃಷ್ಟಿಯಿಂದ ಅನಿವಾಸಿ ಕನ್ನಡಿಗರು ತಮ್ಮ ಹೆಸರು ದಾಖಲಿಸಿ, ಒಂದು ವಿಶಿಷ್ಟ ಗುರುತಿನ ಚೀಟಿಯಾದ ಅನಿವಾಸಿ ಕನ್ನಡಿಗರ ಕಾರ್ಡನ್ನು ಪಡೆದುಕೊಳ್ಳುವಂತೆ ಅನಿವಾಸಿ ಭಾರತೀಯರನ್ನು/ ಅನಿವಾಸಿ ಕನ್ನಡಿಗರನ್ನು ಪ್ರೋತ್ಸಾಹಿಸಲಾಗುವುದು. ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳಿಂದಲೂ ಕ್ಷಿಪ್ರ ಸೇವೆಗಳಲ್ಲದೆ ಹೋಟೆಲ್, ಆಭರಣ ಮಳಿಗೆ, ಆಸ್ಪತ್ರೆ ಮುಂತಾದೆಡೆಗಳಲ್ಲಿ ರಿಯಾಯಿತಿಗಳನ್ನೊಳಗೊಂಡಂತೆ ವಿಶಿಷ್ಟ ಮೌಲ್ಯಗಳ ವಿಶೇಷಾಧಿಕಾರ ಒದಗಿಸುವಂತೆ ಬ್ಯಾಂಕು/ ಕಾರ್ಪೋರೇಟ್ ಸಂಸ್ಥೆಗಳೊಂದಿಗೆ ಈ ಕಾರ್ಡನ್ನು ಮುದ್ರಾಂಕನಗೊಳಿಸಲಾಗುತ್ತದೆ.

ಅನಿವಾಸಿ ಕನ್ನಡಿಗರ ಕಾರ್ಡ ಪಡೆದ ಅನಿವಾಸಿ ಕನ್ನಡಿಗರು ಅಪಘಾತಕ್ಕೀಡಾದ ಸಂದರ್ಭದಲ್ಲಿ ರೂ.2 ಲಕ್ಷರವರೆಗೆ ವಿಮಾಸೌಲಭ್ಯ ಪಡೆಯಲು, ವಿಮಾ ಸಂಸ್ಥೆಗಳೊಂದಿಗೆ ವ್ಯವಹಾರ ಸಂಬಂಧ ಹೊಂದುವ ಸಾಧ್ಯತೆಗಳನ್ನು ಪರಿಶೀಲಿಸಲಾಗುವುದು.

## 6.3. ಅನಿವಾಸಿ ಭಾರತೀಯರನ್ನು/ ಅನಿವಾಸಿ ಕನ್ನಡಿಗರೊಂದಿಗೆ ಸಂಪರ್ಕ ಸಾಧಿಸಿ ಅವರನ್ನು ಸಾಮಾಜಿಕ ಹಾಗೂ ಅಭಿವೃದ್ಧಿಪರ ಯೋಜನೆಗಳಲ್ಲಿ ತೊಡಗಿಸಿಕೊಳ್ಳುವುದು.

### 6.3.1.ಅನಿವಾಸಿ ಭಾರತೀಯರಲ್ಲಿ/ ಅನಿವಾಸಿ ಕನ್ನಡಿಗರಲ್ಲಿ ಕನ್ನಡದ ಹಾಗೂ ಕರ್ನಾಟಕದ ಉತ್ಸವಗಳನ್ನು ಉತ್ತೇಜಿಸುವುದು.

ಅನಿವಾಸಿ ಭಾರತೀಯರು/ಅನಿವಾಸಿ ಕನ್ನಡಿಗರು ಹಾಗೂ ಅವರ ಮಕ್ಕಳು ತಮ್ಮ ಮಾತೃಭಾಷೆಯೊಂದಿಗೆ ಸಂಪರ್ಕವಿರಿಸಿಕೊಳ್ಳಲು ಹಾಗೂ ಕನ್ನಡ ಭಾಷೆಯಲ್ಲಿ ಪ್ರಾವೀಣ್ಯತಾ ಅರ್ಹತೆ ಪಡೆದುಕೊಳ್ಳಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದೊಂದಿಗೆ ಸ್ವಯಂ ಕಲಿಕೆಯ ಪಠ್ಯವನ್ನು ಅಭಿವೃದ್ಧಿಪಡಿಸಿ ಅಂತರ್ಜಾಲ ತಾಣಗಳ ಮೂಲಕ ಒದಗಿಸಲಾಗುವುದು. ಹಾಗೆಯೇ ಹೊರದೇಶಗಳಲ್ಲಿರುವ ಯುವ ಜನಾಂಗದವರ ಅನುಕೂಲಕ್ಕಾಗಿ ಕರ್ನಾಟಕದ ವಿವಿಧ ಪ್ರದೇಶಗಳ ಹಬ್ಬಗಳು, ಉತ್ಸವಗಳು, ಸಂಸ್ಕೃತಿಗಳ ದೃಕ್-ಶ್ರವಣ ಹಿನ್ನೆಲೆಗಳೊಂದಿಗಿನ ವಿವರಗಳನ್ನು ಒದಗಿಸಲಾಗುವುದು. ಅನಿವಾಸಿ ಕನ್ನಡಿಗರ ಮಕ್ಕಳು ಕರ್ನಾಟಕದ ಕಾರ್ಯಕ್ರಮಗಳ ಬಗ್ಗೆ ತಿಳಿದುಕೊಳ್ಳಲು ಅನುವಾಗುವಂತೆ ಹಾಗೂ ಈ ದಿಸೆಯಲ್ಲಿ ಭಾರತ ಸರ್ಕಾರದೊಂದಿಗೆ ಕೂಡಿ ಕೆಲಸ ಮಾಡಲು ಪ್ರಯತ್ನಿಸಲಾಗುವುದು.

### 6.3.2. ಕರ್ನಾಟಕದ ಕಲೆ ಮತ್ತು ಸಂಸ್ಕೃತಿಗಳಿಗೆ ಉತ್ತೇಜನ.

ಕಲೆ, ಯೋಗ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಉತ್ತೇಜಿಸಲು ಸುರಚಿತ ವಿನಿಮಯ ಕಾರ್ಯಕ್ರಮಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಡನೆ ಸಂಘಟಿಸಲಾಗುವುದು. ಅನಿವಾಸಿ ಭಾರತೀಯರು/ ಅನಿವಾಸಿ ಕನ್ನಡಿಗರು ವಾಸವಿರುವ ದೇಶಗಳಲ್ಲಿ ಪ್ರಚಲಿತವಾಗಿರುವ ಆಲೋಚನೆಗಳು ಹಾಗೂ ಭಾವನೆಗಳನ್ನು ಕರ್ನಾಟಕದಲ್ಲಿರುವ ಪರಿಸ್ಥಿತಿಯೊಂದಿಗೆ ಮತ್ತು ಅದಕ್ಕೆ ಪೂರಕವಾಗಿ ಸಂಯೋಜಿಸಲು ಪ್ರೇರೇಪಣೆ ನೀಡುವುದು ಹಾಗೂ ಅದನ್ನು ಉತ್ತೇಜಿಸಲು ವಿಚಾರಗೋಷ್ಠಿಗಳನ್ನು ಏರ್ಪಡಿಸಲು ಅನುವು ಮಾಡಿಕೊಡಲಾಗುವುದು.

### 6.3.3. ಅನಿವಾಸಿ ಭಾರತೀಯರಿಗಾಗಿ/ ಅನಿವಾಸಿ ಕನ್ನಡಿಗರಿಗಾಗಿ ವಿಶೇಷ ಸಮಗ್ರ ಪ್ರವಾಸ ವ್ಯವಸ್ಥೆ.

ಕರ್ನಾಟಕವು ಹಲವಾರು ಅವಕಾಶಗಳ ನಾಡು ಎಂದು ಹೆಸರಾಗಿದೆ. ಸ್ವಾಭಾವಿಕವಾಗಿಯೇ ಅನಿವಾಸಿ ಭಾರತೀಯರು/ ಅನಿವಾಸಿ ಕನ್ನಡಿಗರು ಪ್ರವಾಸೋದ್ಯಮ ಕೈಗಾರಿಕೆಯಲ್ಲಿ, ಅದರಲ್ಲೂ ವಿಶೇಷವಾಗಿ ಪ್ರಕೃತಿ, ಪರಂಪರೆ, ವೈದ್ಯಕೀಯ, ಸಾಹಸ, ಆತಿಥ್ಯ, ವನವಿಹಾರ ಮುಂತಾದ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಲು ಉತ್ಸುಕರಾಗಿರುತ್ತಾರೆ. ಅವಶ್ಯಕ ಅಗತ್ಯಗಳೊಂದಿಗೆ ಕೆಲವು ನಿರ್ದಿಷ್ಟ ಪ್ರವಾಸೋದ್ಯಮ ಅಂತರ್ಜಾಲ ತಾಣಗಳನ್ನು ದತ್ತು ಪಡೆಯುವ ಕಲ್ಪನೆಗಳನ್ನು ಕೂಡ ಒದಗಿಸಲಾಗುತ್ತದೆ.





ಅನಿವಾಸಿ ಭಾರತೀಯರು/ ಅನಿವಾಸಿ ಕನ್ನಡಿಗರು ಕರ್ನಾಟಕಕ್ಕೆ ಭೇಟಿ ನೀಡಿದಾಗ ಅವರಿಗಾಗಿಯೇ ನಿರ್ದಿಷ್ಟವಾಗಿ ರಚಿಸಲಾದ ವಿಶೇಷ ಪ್ರವಾಸೋದ್ಯಮ ಪ್ಯಾಕೇಜುಗಳನ್ನು ಪ್ರವಾಸೋದ್ಯಮ ಇಲಾಖೆಯ ಅಂತರ್ಜಾಲ ತಾಣಗಳಲ್ಲಿ ಒದಗಿಸಲಾಗುತ್ತದೆ.

### 6.3.4.ಅನಿವಾಸಿ ಭಾರತೀಯರಿಗಾಗಿ/ ಅನಿವಾಸಿ ಕನ್ನಡಿಗರಿಗಾಗಿ "ನಮ್ಮ ಊರು – ನಮ್ಮ ನಾಡು" ಕಾರ್ಯಕ್ರಮ.

ಅನಿವಾಸಿ ಭಾರತೀಯರು/ ಅನಿವಾಸಿ ಕನ್ನಡಿಗರು ತಮ್ಮ ಮಾತೃಭೂಮಿಯೆಡೆಗೆ, ಮುಖ್ಯವಾಗಿ ಶಾಲೆಗಳ ಸುಧಾರಣೆಗೆ, ಸ್ಥಳೀಯ ದೇವಸ್ಥಾನಗಳ ಜೀರ್ಣೋದ್ಧಾರಗಳೆಡೆಗೆ, ಸತತವಾಗಿ ಕೊಡುಗೆಗಳನ್ನು ನೀಡುತ್ತಿದ್ದಾರಲ್ಲದೆ ರಾಜ್ಯದ ಅಭಿವೃದ್ಧಿಯ ಅವಿಭಾಜ್ಯ ಅಂಗವಾಗಿದ್ದಾರೆ. ಪಂಚಾಯಿತಿಗಳನ್ನೂ ಒಳಗೊಂಡಂತೆ ರಾಜ್ಯದ ಅಭಿವೃದ್ಧಿ ಯೋಜನೆಗಳನ್ನು ಅನಿವಾಸಿ ಭಾರತೀಯ ಸಮಿತಿಯ ಜಾಲ ತಾಣಗಳಲ್ಲಿ ಪ್ರದರ್ಶಿಸಿ ಅನಿವಾಸಿ ಭಾರತೀಯರು/ ಅನಿವಾಸಿ ಕನ್ನಡಿಗರು ಅವುಗಳಲ್ಲಿ ಭಾಗವಹಿಸುವಂತೆ ಸುಗಮಗೊಳಿಸುತ್ತದೆ. ಅನಿವಾಸಿ ಭಾರತೀಯರು/ ಅನಿವಾಸಿ ಕನ್ನಡಿಗರು ತಾವೇ ಆರಿಸಿದ ಕ್ಷೇತ್ರಗಳಲ್ಲಿ ಸೂಚಿಸುವ ಯಾವುದೇ ಅಭಿವೃದ್ಧಿ ಯೋಜನೆಯನ್ನು ಅನಿವಾಸಿ ಭಾರತೀಯ ಸಮಿತಿಯು ಆಯಾ ರಾಜ್ಯ ಸರ್ಕಾರದ ಇಲಾಖೆ/ ಅಧಿಕಾರಿಗಳೊಂದಿಗೆ ಸುಲಲಿತಗೊಳಿಸುತ್ತದೆ.

ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಕೊಡುಗೆಯನ್ನು ಗುರುತಿಸಿ, ಅಭಿನಂದಿಸಲು ಅವರ ಮಾನವೀಯ/ ಹೃದಯಸ್ಪರ್ಶಿ ಕೆಲಸಗಳ ಸಂಕಲನವನ್ನು ಪ್ರತಿ ಆರ್ಥಿಕ ವರ್ಷದಲ್ಲೂ ಪರಿಷ್ಕರಿಸಿ, ಅಂತರ್ಜಾಲ ತಾಣದಲ್ಲಿ ಕ್ಷಿಪ್ರವಾಗಿ ಒದಗಿಸಲಾಗುವುದು.

ಅನಿವಾಸಿ ಭಾರತೀಯರು ಭಾರತದಲ್ಲಿ ಸಾಮಾಜಿಕ ಹಾಗೂ ಅಭಿವೃದ್ಧಿ ಯೋಜನೆಗಳಲ್ಲಿ ತೊಡಗಿಸಿಕೊಳ್ಳಲು ಅನುವು ಮಾಡಿಕೊಡಲು ಒಂದು ವಿಶ್ವಾಸಾರ್ಹವಾದ ಸಾಂಸ್ಥಿಕ ರೀತಿಯಲ್ಲಿ ಕಾರ್ಯ ನಿರ್ವಹಿಸಲು ಸ್ಥಾಪಿಸಿದ 'ಸಾಗರೋತ್ತರ ಭಾರತೀಯರ ಭಾರತ ಅಭಿವೃದ್ಧಿ ಪ್ರತಿಷ್ಠಾನ'ದೊಂದಿಗೆ ಕರ್ನಾಟಕ ಅನಿವಾಸಿ ಭಾರತೀಯ ಸಮಿತಿಯು ಆಪ್ತವಾಗಿ ಕೆಲಸ ಮಾಡುತ್ತದೆ. ಈ ಪ್ರತಿಷ್ಠಾನಕ್ಕೆ 2010ರ ವಿದೇಶೀ ದೇಣಿಗೆ ನಿಯಂತ್ರಣ ಕಾಯ್ದೆಯಿಂದ ವಿನಾಯಿತಿ ದೊರೆತಿದ್ದು, ಕರ್ನಾಟಕ ಹಾಗೂ ಭಾರತ ಸರ್ಕಾರಗಳೆರಡರ ಮುಂಚೂಣಿ ಯೋಜನೆಗಳೆಡೆಗೆ ದಯಾಪರರಾದ ಅನಿವಾಸಿ ಭಾರತೀಯರು ಸಾಗಲು ಅನುವು ಮಾಡಿಕೊಡುತ್ತದೆ.

## 6.4. ವಿಶ್ವದೆಲ್ಲಡೆ ನೆಲೆಸಿರುವ ಅನಿವಾಸಿ ಭಾರತೀಯರು/ಅನಿವಾಸಿ ಕನ್ನಡಿಗರ ಸಂಘಟನೆಗಳೊಡನೆ ಸಂಪರ್ಕ.

### 6.4.1.ವಿಶ್ವಾದ್ಯಂತ ಇರುವ ಎಲ್ಲಾ ಕನ್ನಡ ಕೂಟಗಳನ್ನು ಪ್ರೋತ್ಸಾಹಿಸುವುದು.

ವಿಶ್ವದೆಲ್ಲೆಡೆಯೂ ಕರ್ನಾಟಕವನ್ನು ಪ್ರತಿನಿಧಿಸುವ ಕನ್ನಡಿಗರು ತಮ್ಮ ಸಾಮಾಜಿಕ ಕಳಕಳಿಗೆ ಹೆಸರಾಗಿದ್ದಾರೆ. ಇತರ ಅನಿವಾಸಿ ಭಾರತೀಯ/ ಅನಿವಾಸಿ ಕನ್ನಡಿಗರೊಂದಿಗೆ ಮತ್ತು ಕರ್ನಾಟಕದಲ್ಲಿರುವ ಇತರ ಕನ್ನಡಿಗರೊಂದಿಗೆ ಬೆರೆಯಲು ಮತ್ತು ಎಲ್ಲಾ ಕನ್ನಡಿಗರ ಚಟುವಟಿಕೆಗಳನ್ನು ಒಗ್ಗೂಡಿಸುವ ಬೆಂಬಲದೊಂದಿಗೆ ಸಂಘಟಿಸಿ, ಸಮನ್ವಯಗೊಳಿಸಲು, ಸಂಪರ್ಕಜಾಲವನ್ನು ಉತ್ತೇಜಿಸುವುದು. ಸಾಗರೋತ್ತರ ದೇಶಗಳಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಉಳಿಸಿ,

ಬೆಳೆಸುವಲ್ಲಿ, ಕನ್ನಡ ಕೂಟಗಳನ್ನು ರಚಿಸಿಕೊಳ್ಳುವಲ್ಲಿ ಅಮೆರಿಕ ಯಶಸ್ವಿಯಾಗಿದೆ.

ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸಲು ಮತ್ತು ಇತರರೊಂದಿಗೆ ಬೆರೆಯುವಂತಾಗಲು ಕನ್ನಡಿಗರು ತಾವು ವಾಸಿಸುತ್ತಿರುವ ಆಯಾ ದೇಶಗಳ ಎಲ್ಲಾ ಪ್ರದೇಶಗಳಲ್ಲೂ ಕನ್ನಡ ಕೂಟಗಳನ್ನು ರಚಿಸಿಕೊಳ್ಳುವಂತೆ ಉತ್ತೇಜಿಸಲಾಗುವುದು.

### 6.4.2. ಪ್ರವಾಸಿ ಭಾರತೀಯ ದಿವಸ ಕಾರ್ಯಕ್ರಮದಲ್ಲಿ ಭಾಗವಹಿಸುವುದು.

ಭಾರತದ ಅಭಿವೃದ್ಧಿಗೆ ಸಾಗರೋತ್ತರ ಭಾರತೀಯ ಸಮುದಾಯದ ಕೊಡುಗೆಯನ್ನು ಸ್ಮರಿಸಲು ಭಾರತ ಸರ್ಕಾರದ ವಿದೇಶಾಂಗ ಸಚಿವಾಲಯವು ಪ್ರತಿ ವರ್ಷವೂ ಜನವರಿ 9ನೇ ತಾರೀಖಿನಂದು ಪ್ರವಾಸಿ ಭಾರತೀಯ ದಿವಸವನ್ನು ಆಚರಿಸುತ್ತಾ ಬಂದಿದೆ. 1915ನೇ ಜನವರಿ 9ರಂದು ಮಹಾತ್ಮ ಗಾಂಧಿಯವರು ದಕ್ಷಿಣ ಆಫ್ರಿಕದಿಂದ ಭಾರತಕ್ಕೆ ಪ್ರವಾಸಿಯಾಗಿ ಬಂದು, ಭಾರತದ ಸ್ವಾತಂತ್ರ್ಯ ಸಂಗ್ರಾಮವನ್ನು ಮುನ್ನಡೆಸಿ ಭಾರತೀಯರ ಬದುಕನ್ನೇ ಬದಲಿಸಿದ್ದರಿಂದ ಆ ದಿನವನ್ನೇ ಭಾರತೀಯ ಪ್ರವಾಸಿ ದಿವಸವನ್ನಾಗಿ ಆಚರಿಸಲಾಗುತ್ತಿದೆ.

ಭಾರತದ ಬೆಳವಣಿಗೆಯಲ್ಲಿ ಭಾರತೀಯ ಪ್ರವಾಸಿಗಳ ಪಾತ್ರವನ್ನು ಶ್ಲಾಘಿಸುವ ಉದ್ದೇಶದಿಂದ ವೈಯಕ್ತಿಕವಾಗಿ ಅಸಾಧಾರಣ ಸಾಧನೆ ಮಾಡಿರುವಂತಹವರನ್ನು ಪ್ರತಿ ಎರಡು ವರ್ಷಕ್ಕೊಮ್ಮೆ ಗುರುತಿಸಿ, ಪ್ರತಿಷ್ಠಿತ 'ಭಾರತೀಯ ಪ್ರವಾಸಿ ಸನ್ಮಾನ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಗುತ್ತದೆ. ಅನಿವಾಸಿ ಭಾರತೀಯರ ಪ್ರಮುಖ ಸಮಸ್ಯೆಗಳನ್ನು ಚರ್ಚಿಸಲೂ ಈ ಸಂದರ್ಭವು ವೇದಿಕೆಯಾಗಿದೆ.

ಪ್ರವಾಸಿ ಭಾರತೀಯ ದಿವಸ ಕಾರ್ಯಕ್ರಮದ ಭಾಗೀದಾರ ರಾಜ್ಯಗಳಲ್ಲಿ ಮುಂಚೂಣಿ ರಾಜ್ಯವಾದ ಕರ್ನಾಟಕವು, ಕರ್ನಾಟಕ ಮೂಲದವರಾದ ಅಥವಾ ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಕಾರಣರಾದ ಅಸಾಧಾರಣ ಸಾಧನೆಯ ಒಬ್ಬ ವ್ಯಕ್ತಿಯನ್ನು **'ವರ್ಷದ ಅನಿವಾಸಿ ಕನ್ನಡಿಗ'** ಎಂಬ ಪ್ರಶಸ್ತಿಯೊಡನೆ ಪ್ರತಿ ಎರಡು ವರ್ಷಕ್ಕೊಮ್ಮೆ ಗೌರವಿಸುತ್ತದೆ.

## 6.5. ಕರ್ನಾಟಕದಲ್ಲಿ ಬಂಡವಾಳ ಹೂಡಿಕೆದಾರ ಅನಿವಾಸಿ ಭಾರತೀಯರಿಗೆ/ ಅನಿವಾಸಿ ಕನ್ನಡಿಗರಿಗೆ ಗೌರವಾರ್ಪಣೆ.

### 6.5.1. ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಆರ್ಥಿಕ ಮತ್ತು ಜ್ಞಾನ ಸಂಪತ್ತಿನ ಉಪಯೋಗದ ಕ್ರಮದ ಸುಗಮಗೊಳಿಸುವಿಕೆ.

ಅನಿವಾಸಿ ಭಾರತೀಯ/ ಅನಿವಾಸಿ ಕನ್ನಡಿಗರಿಗೆ ಉದ್ಯಮ ಮತ್ತು ಬಂಡವಾಳ ಹೂಡಿಕೆ ಸಂಬಂಧದ ಮಾಹಿತಿಗೆ ಅನಿವಾಸಿ ಭಾರತೀಯ ಸಮಿತಿಯು, ಸಾಗರೋತ್ತರ ಭಾರತೀಯ ಸುಗಮಕಾರಕ ಕೇಂದ್ರದ ಸಹಯೋಗದೊಂದಿಗೆ ಮೊದಲ ಸಂಪರ್ಕ ಕೇಂದ್ರವಾಗಿ ಕೆಲಸ ಮಾಡುವುದು ಮತ್ತು ಪರಿಷ್ಕೃತ ಸರ್ಕಾರಿ ನೀತಿಗಳನ್ನು ಒದಗಿಸುವುದು, ತಜ್ಞರಿಂದ ಲೇಖನಗಳನ್ನು ಬರೆಸುವುದು, ಭಾರತೀಯ ವಲಸೆಗಾರರಿಗೆ ಆಸಕ್ತಿಯುಳ್ಳ ವಿಷಯಗಳ ಜಾಲಗೋಷ್ಠಿ(webinar) ಗಳನ್ನೇರ್ಪಡಿಸುವುದು, ಕರ್ನಾಟಕದ ಹೂಡಿಕೆ ಅವಕಾಶಗಳ ಅನಾವರಣ ಮಾಡುವುದು, ಉದ್ಯಮಗಳ ನಡುವೆ ಹಾಗೂ ಉದ್ಯಮ-ಸರ್ಕಾರಗಳ ನಡುವೆ ಸಭೆಗಳನ್ನೇರ್ಪಡಿಸುವುದು, ಹೂಡಿಕೆದಾರರ ಸಭೆಗಳಲ್ಲಿ ಭಾಗವಹಿಸುವುದು ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತದೆ.





### 6.5.2. ಅನಿವಾಸಿ ಭಾರತೀಯ/ ಅನಿವಾಸಿ ಕನ್ನಡಿಗ ಉದ್ಯಮಿಗಳ ಮಾರ್ಗದರ್ಶಕ ಘಟಕ.

ಕರ್ನಾಟಕ ರಾಜ್ಯದ ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯು ಸ್ಥಾಪಿಸಿರುವ 'ಕರ್ನಾಟಕ ಉದ್ಯೋಗ ಮಿತ್ರ' ಘಟಕವು ಕರ್ನಾಟಕದಲ್ಲಿ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಹೂಡಿಕೆದಾರರಿಗೆ ಸಹಾಯ ಮಾಡುವ ಕಾರ್ಯ ನಿರ್ವಹಿಸುತ್ತದೆ. ಅಂಗೀಕೃತ ಯೋಜನೆಗಳಿಗೆ ಮೂಲ ಸೌಲಭ್ಯಗಳನ್ನು ಮಂಜೂರು ಮಾಡಲು ಕರ್ನಾಟಕ ಉದ್ಯೋಗ ಮಿತ್ರವು ಆಡಳಿತ ಕಚೇರಿಯಂತೆ ಕೆಲಸ ಮಾಡುತ್ತದೆ. ಯೋಜನೆಗಳು ಸರಿಯಾಗಿ ಅನುಷ್ಠಾನಗೊಳ್ಳುವವರೆಗೂ ಹೂಡಿಕೆದಾರರಿಗೆ ಸ್ಪಷ್ಟವಾದ ನಕಾಶೆ, ಗ್ರಾಹಕಸ್ನೇಹಿ ನಿರ್ದೇಶನಗಳನ್ನು ಹಾಗೂ ಮಾರ್ಗದರ್ಶನವನ್ನು ನೀಡುತ್ತದೆ. ಪ್ರಸ್ತಾವನೆಗಳಿಗೆ ಅನುಮತಿ ನೀಡಿಕೆಯನ್ನು ಚುರುಕುಗೊಳಿಸಲು, ಭೂಮಿ ಮಂಜೂರಾತಿಯಲ್ಲಿ ಪ್ರಾಶಸ್ತ್ಯ ನೀಡಲು ಮತ್ತು ಜಾಲತಾಣಗಳಲ್ಲಿ ಕ್ಷಿಪ್ರ ಅರ್ಜಿ ಸಲ್ಲಿಸಲು, ಬೇಕಾದಾಗ, ಬೇಕಾದಂತೆ ನಿಯಂತ್ರಣಾತ್ಮಕ ದಾಖಲೆಗಳನ್ನು ಒಪ್ಪಿಸಲು, ಹಲವಾರು ಇಲಾಖೆಗಳ ಅಂಗೀಕಾರ/ ಅನುಮತಿಗಳನ್ನು ಪಡೆಯಲು ಮತ್ತು ಇತರ ಸರ್ಕಾರಿ ಅನುಮತಿಗಳನ್ನು ವಿಲೇವಾರಿ ಮಾಡಲು ಕರ್ನಾಟಕ ಉದ್ಯೋಗ ಮಿತ್ರದಲ್ಲಿ ಅನಿವಾಸಿ ಭಾರತೀಯ/ ಅನಿವಾಸಿ ಕನ್ನಡಿಗರ ಪ್ರತ್ಯೇಕ ಬಂಡವಾಳ ಹೂಡಿಕೆ ಉತ್ತೇಜಕ ಘಟಕವನ್ನು ಸ್ಥಾಪಿಸಲಾಗುವುದು.

### 6.5.3. ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಹೂಡಿಕೆಗಳಿಗೆ ಪ್ರೋತ್ಸಾಹಧನ ಮತ್ತು ವಿನಾಯಿತಿಗಳು.

ಸ್ಥಳ ಮತ್ತು ಹೂಡಿಕೆ ಆಧರಿತ ಪ್ರೋತ್ಸಾಹಧನ ಹಾಗೂ ಆಕರ್ಷಕ ವಿನಾಯಿತಿಗಳನ್ನು ನೀಡುತ್ತದೆ. ಹಾಗೆಯೇ ವೈಮ್ಯಾಂತರಿಕ್ಷ ಮತ್ತು ರಕ್ಷಣೆ, ವಸ್ತ್ರಗಳು, ವಿಶೇಷ ಆರ್ಥಿಕ ವಲಯ, ಐಟಿ-ಬಿಟಿ, ವಿದ್ಯುನ್ಮಾನ ವ್ಯವಸ್ಥೆಯ ವಿನ್ಯಾಸ ಮತ್ತು ತಯಾರಿಕೆ, ಪ್ರವಾಸೋದ್ಯಮ, ಕೃಷಿ ಉದ್ಯಮ ಇತ್ಯಾದಿ ಕ್ಷೇತ್ರಗಳಲ್ಲಿನ ಹೂಡಿಕೆಗೆ ಯಥೇಚ್ಛ ಪ್ರೋತ್ಸಾಹಧನ ಹಾಗೂ ವಿನಾಯಿತಿಗಳನ್ನು ನೀತಿಯಲ್ಲಿ ನೀಡಲಾಗಿದೆ. ಕಾಲಾನುಕ್ರಮದಲ್ಲಿ ರಾಜ್ಯ ಸರ್ಕಾರವು ಆಗಿಂದಾಗ್ಗೆ ಎಲ್ಲ ಕ್ಷೇತ್ರಗಳ ನೀತಿಗಳಲ್ಲೂ ಘೋಷಿಸುವ ಪ್ರೋತ್ಸಾಹಧನ ಹಾಗೂ ವಿನಾಯಿತಿ ಸೌಲಭ್ಯಗಳಿಗೆ ಕೂಡಾ ಅನಿವಾಸಿ ಭಾರತೀಯ/ ಅನಿವಾಸಿ ಕನ್ನಡಿಗರು ಅರ್ಹರಾಗಿರುತ್ತಾರೆ.

ಬಂಡವಾಳ ಹೂಡಿಕೆ, ಯೋಜನೆಯ ಸ್ಥಳ, ಸೃಷ್ಟಿಸುವ ಪ್ರತ್ಯಕ್ಷ ಹಾಗೂ ಪರೋಕ್ಷ ಉದ್ಯೋಗಾವಕಾಶಗಳು, ವ್ಯಾಪಾರೀ ಹಾಗೂ ಪೂರಕ ಉದ್ಯಮಗಳಿಂದಾಗಿ ಇನ್ನೂ ಹೆಚ್ಚಿನ ಹೂಡಿಕೆಗಳನ್ನು ಆಕರ್ಷಿಸುವುದು ಮುಂತಾದ ಅಂಶಗಳಿಗೆ ಆಯಾ ಇಲಾಖೆಗಳನ್ನು ಸೂಕ್ತ ಮೌಲ್ಯ ಮಾಪನ ಮಾಡಿ, ಸಂದರ್ಭಾನುಸಾರ ಪ್ರತಿಯೊಂದು ಅರ್ಹ ವಿಷಯಕ್ಕೂ (ರೂ.250 ಕೋಟಿಗೂ ಹೆಚ್ಚಿನ ಹೂಡಿಕೆಗಳಿಗೆ ಮಾತ್ರ ಅನ್ವಯ) ಅನಿವಾಸಿ ಭಾರತೀಯ/ ಅನಿವಾಸಿ ಕನ್ನಡಿಗರಿಗೆ ವಿಶೇಷ ಪ್ರೋತ್ಸಾಹಧನ ಮತ್ತು ವಿನಾಯಿತಿ ನೀಡುವ ಬಗ್ಗೆ ಪರಿಶೀಲಿಸಲಾಗುವುದು.

### 6.5.4. 'ಅವಳಿ-ನಗರ' ವ್ಯವಸ್ಥೆ.

ಬೆಲಾರುಸ್‌ನ ಮಿನ್ಸ್ಕ್-ಬೆಂಗಳೂರು (1989), ಅಮೆರಿಕದ ಕ್ಲೀವ್‌ಲ್ಯಾಂಡ್-ಬೆಂಗಳೂರು (1992), ಸಿನ್‌ಸಿನ್ನಾಟಿ-ಮೈಸೂರು (2012), ಸ್ಯಾನ್‌ಫ್ರಾನ್ಸಿಸ್ಕೋ-ಬೆಂಗಳೂರು (2013)

ಹಾಗೂ ಚೀನಾದ ವಿದ್ಯುನ್ಮಾನ ತಯಾರಿಕಾ ಕೇಂದ್ರ ಸಿಚುವಾನ್ ಪ್ರಾಂತ್ಯದ ಚೆಂಗ್ಡು-ಬೆಂಗಳೂರು (2013)ಗಳಂತಹ ಜೋಡಿ ನಗರಗಳ ವ್ಯವಸ್ಥೆಯ ಮೂಲಕ ವಿವಿಧ ಕ್ಷೇತ್ರಗಳಲ್ಲಿ ಸಹೋದ್ಯಮ ಸಂಬಂಧ ಹೊಂದುವ ಅವಕಾಶಗಳನ್ನು ಕರ್ನಾಟಕ ಸರ್ಕಾರವು ತನ್ನ 'ಅವಳಿ-ನಗರ' ವ್ಯವಸ್ಥೆಯಡಿಯಲ್ಲಿ ನೀಡಿದೆ.

ಕಲೆ, ಸಂಸ್ಕೃತಿ, ಕೈಗಾರಿಕೆ ಇತ್ಯಾದಿಗಳನ್ನು ಇನ್ನೂ ಹಲವಾರು ಇಂತಹ 'ಅವಳಿ-ನಗರ'ಗಳ ವ್ಯವಸ್ಥೆಯ ಮೂಲಕ ಕನ್ನಡ ಕೂಟಗಳ ಸಹಯೋಗದೊಡನೆ ಹಂಚಿಕೊಳ್ಳಲು ಮತ್ತು ಇತರ ಹಲವಾರು ಕ್ಷೇತ್ರಗಳಲ್ಲಿ ಉತ್ತಮ ಪರಿಪಾಠಗಳನ್ನು ಆರೋಗ್ಯಕರ ಪೈಪೋಟಿಯಿಂದ ಅಳವಡಿಸಿಕೊಳ್ಳಲು ಪ್ರೋತ್ಸಾಹ ನೀಡಲಾಗುವುದು.

### 6.6. ಅನಿವಾಸಿ ಕನ್ನಡಿಗರಿಂದ ತಂತ್ರಜ್ಞಾನ ಸುಗಮ ವರ್ಗಾವಣೆ ಸೌಲಭ್ಯ.

#### 6.6.1. ಗಡಿಯಾಚೆಗಿನ ಉದ್ಯಮಗಳನ್ನು ಪ್ರೋತ್ಸಾಹಿಸುವುದು.

ಗಡಿಯಾಚೆಗಿನ ಉದ್ಯಮಿಗಳಿಗೆ ಹೊಸ ಮಾರುಕಟ್ಟೆ ಸೌಲಭ್ಯ ಮತ್ತು ಸರಬರಾಜು ಮೂಲಗಳನ್ನು ಕಲ್ಪಿಸುವ ಜೊತೆಗೆ ಕಾರ್ಮಿಕಶಕ್ತಿ ಹಾಗೂ ತಂತ್ರಜ್ಞಾನಗಳನ್ನು ಬಳಸಿಕೊಂಡು ಸಮಗ್ರ ಆರ್ಥಿಕ ಅಭಿವೃದ್ಧಿಗೆ ಉಪಯೋಗಿಸಿಕೊಳ್ಳಲು ವಿಫುಲ ಅವಕಾಶವಿದ್ದು, ಇದರಿಂದ ಗಡಿಯ ಎರಡೂ ಕಡೆಗಳ ಆರ್ಥಿಕ ಅಭಿವೃದ್ಧಿಗೆ ಕೊಡುಗೆ ನೀಡಬಲ್ಲದು. ಅನಿವಾಸಿ ಭಾರತೀಯರು/ ಅನಿವಾಸಿ ಕನ್ನಡಿಗರ ಕ್ರಿಯಾತ್ಮಕ ಸಹಕಾರದೊಂದಿಗೆ ಕರ್ನಾಟಕ ರಾಜ್ಯದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಉದ್ದೇಶಿಸಿದೆ. ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಗಡಿಯಾಚೆಗಿನ ಉದ್ಯಮಶೀಲ ಮತ್ತು ಉದ್ಯಮ ಪೋಷಣಾ ಕೇಂದ್ರಗಳಿಗೆ ಪ್ರೋತ್ಸಾಹ ನೀಡುವ ಮೂಲಕ ಕರ್ನಾಟಕಕ್ಕೆ ಜ್ಞಾನ ಮತ್ತು ತಂತ್ರಜ್ಞಾನ ವರ್ಗಾವಣೆಯನ್ನು ಕ್ರಿಯಾಶೀಲವಾಗಿ ಉತ್ತೇಜಿಸಬಹುದಾಗಿದೆ.

#### 6.6.2. ಅನಿವಾಸಿ ಕನ್ನಡಿಗರಿಗಾಗಿ ಉದ್ಯಮ ಪೋಷಣಾ ಕೇಂದ್ರ

ವಾಯುಬಲ ವಿಜ್ಞಾನ, ವಾಹನೋದ್ಯಮ, ಬ್ಯಾಂಕಿಂಗ್, ಹಣಕಾಸು, ಆರೋಗ್ಯ, ಮಾಹಿತಿ ತಂತ್ರಜ್ಞಾನ (ಸಾಫ್ಟ್‌ವೇರ್ ಮತ್ತು ಸೇವೆಗಳು), ಚಿಲ್ಲರೆ ಮತ್ತು ಇ-ವಾಣಿಜ್ಯ, ಸಾಮಾಜಿಕ ಉದ್ಯಮಗಳು ಇತ್ಯಾದಿ ವೈವಿಧ್ಯಮಯ ಕ್ಷೇತ್ರಗಳಲ್ಲಿ ಗಣನೀಯ ಸಂಖ್ಯೆಯ ಅನಿವಾಸಿ ಭಾರತೀಯರು/ ಅನಿವಾಸಿ ಕನ್ನಡಿಗರು ತಾವು ನೆಲೆಸಿರುವ ದೇಶಗಳಿಗೆ ತಮ್ಮ ಕೌಶಲ್ಯಗಳನ್ನು ಧಾರೆ ಎರೆದಿದ್ದಾರಲ್ಲದೆ ಅವನ್ನು ತಮ್ಮ ಮಾತೃಭೂಮಿಯ ಅಭಿವೃದ್ಧಿಗೂ ಬಳಸಲು ಕಾತರರಾಗಿದ್ದಾರೆ. ಅನಿವಾಸಿ ಭಾರತೀಯ/ ಅನಿವಾಸಿ ಕನ್ನಡಿಗರಲ್ಲಿ ಉದ್ಯಮವನ್ನು ಉತ್ತೇಜಿಸಲು, ಸರ್ಕಾರದ ನಡುವೆ ಒಂದು ಔಪಚಾರಿಕ ಹಾಗೂ ವ್ಯವಸ್ಥಿತ ಸಂಬಂಧವನ್ನೇರ್ಪಡಿಸಲು ಅವರಿಗೆ ಉದ್ಯಮ ವ್ಯಾಪರ ಪೋಷಣಾ ಕೇಂದ್ರಗಳ ಸಹಾಯವನ್ನು ಐಟಿ-ಬಿಟಿ ಮತ್ತು ವಿಜ್ಞಾನ-ತಂತ್ರಜ್ಞಾನ ಇಲಾಖೆಗಳ ಸಹಯೋಗದೊಂದಿಗೆ ವಿಶೇಷ ಮಾಸಿಕ ಬಾಡಿಗೆ ದರದಲ್ಲಿ ಒಂದು ವರ್ಷದವರೆಗೆ ಒದಗಿಸಲಾಗುವುದು.





### 6.7. ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಸಾಮಾನ್ಯ ಯೋಗಕ್ಷೇಮ ಸಮಸ್ಯೆಗಳ ಸುಗಮೀಕರಣ.

#### 6.7.1. ವಿದೇಶಗಳಲ್ಲಿ ಉದ್ಯೋಗಗಳನ್ನು ಹೊಂದಲು ಕನ್ನಡಿಗರನ್ನು ಉತ್ತೇಜಿಸುವುದು.

ಭಾರತದ ಯೋಜನಾ ಆಯೋಗವು ತನ್ನ 12ನೇ ಯೋಜನೆಯ ಚರ್ಚೆಗಳಲ್ಲಿ, ಭಾರತದ 'ಜನಸಂಖ್ಯಾ ಲಾಭಾಂಶ' (Demographic Dividend)ದ ಕಾರಣವು, ಚೀನಾ ಮತ್ತು ಆರ್ಥಿಕ ಸಹಕಾರ ಹಾಗೂ ಅಭಿವೃದ್ಧಿ ಸಂಸ್ಥೆಯ ಸದಸ್ಯ ರಾಷ್ಟ್ರಗಳಿಗಿಂತಲೂ ತುಂಬಾ ಕಡಿಮೆ ವಯೋಮಾನದ, ವಿಶ್ವದ ಅತ್ಯಂತ ಯುವ ಕಾರ್ಮಿಕ ಶಕ್ತಿಯೇ ಎಂದು ಹೇಳುತ್ತಲೇ 2020ರ ವೇಳೆಗೆ ವಿಶ್ವದ ಆರ್ಥಿಕತೆಯು 5.6 ಕೋಟಿಯಷ್ಟು ಕುಶಲ ಕರ್ಮಿಗಳ ಕೊರತೆಗೆ ಸಾಕ್ಷಿಯಾಗಲಿದೆಯೆಂದು ನಿರೀಕ್ಷಿಸಲಾಗಿದೆ ಎಂದು ಸೂಚಿಸಿದೆ. ಹೀಗಾಗಿ ಉತ್ಪಾದನಾ ಸಾಧ್ಯತೆಗಳ ಮಿತಿಯನ್ನು ವಿಸ್ತರಿಸುವುದಷ್ಟೇ ಅಲ್ಲದೆ ಭಾರತದ ಹಾಗೂ ವಿಶ್ವದ ಕುಶಲಕರ್ಮಿಗಳ ಬೇಡಿಕೆಯನ್ನು ಪೂರೈಸಲು ಭಾರತದ 'ಜನಸಂಖ್ಯಾ ಲಾಭಾಂಶ'ವನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು.

ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ, 'ಅಂತಾರಾಷ್ಟ್ರೀಯ ವಲಸೆ'ಗೆ ಸಂಬಂಧಿಸಿದ ಎಲ್ಲ ವಿಷಯಗಳ ಬಗ್ಗೆಯೂ ಭಾರತ ಸರ್ಕಾರದ ವಿದೇಶಾಂಗ ಸಚಿವಾಲಯದ ಸಂಶೋಧನಾ ಚಿಂತನಾ ಘಟಕದಂತೆ ಕೆಲಸ ಮಾಡುವ ಭಾರತ ವಲಸೆ ಕೇಂದ್ರ (ಹಿಂದೆ ಸಾಗರೋತ್ತರ ಉದ್ಯೋಗದ ಭಾರತೀಯ ಪರಿಷತ್ತು)ದೊಂದಿಗೆ ಕರ್ನಾಟಕದ ಅನಿವಾಸಿ ಭಾರತೀಯ ಸಮಿತಿಯು ಪಾಲುಗಾರನಾಗುತ್ತದೆ ಮತ್ತು ಕರ್ನಾಟಕದ ಮೇಲೆ ವಿಶೇಷ ಗಮನ ಹರಿಸುತ್ತ ಪ್ರಾಯೋಗಿಕ, ವಿಶ್ಲೇಷಣಾತ್ಮಕ ಮತ್ತು ನೀತಿ ಸಂಬಂಧಿತ ಸಂಶೋಧನೆಯನ್ನೂ, ಈ ಕೆಳಗೆ ತೋರಿಸಿರುವ ಕ್ಷೇತ್ರಗಳಲ್ಲಿ ಸದಾಚಾರ (Best Practices) ಗಳನ್ನು ದಾಖಲಿಸುವ ಪ್ರಾಯೋಗಿಕ ಯೋಜನೆಗಳನ್ನೂ ಕೈಗೆತ್ತಿಕೊಳ್ಳುತ್ತದೆ

- ಕರ್ನಾಟಕದ ಯುವಕರಿಗಾಗಿ ಉದಯೋನ್ಮುಖ ದೇಶ-ನಿರ್ದಿಷ್ಟ/ ವಲಯ-ನಿರ್ದಿಷ್ಟ ವಿದೇಶೀ ಉದ್ಯೋಗಾವಕಾಶಗಳ ಆಧಾರ ದತ್ತಾಂಶವನ್ನು ಸ್ಥಾಪಿಸಿ, ಸಲಹುವುದು.
- ಸಾಗರೋತ್ತರ ಕಾರ್ಮಿಕ ಮಾರುಕಟ್ಟೆಯ ಸರಬರಾಜು, ಕೊರತೆಗಳನ್ನು ಗುರುತಿಸಿ, ಅವುಗಳನ್ನು ಭರ್ತಿಮಾಡಲು ಅನುವಾಗುವಂತೆ ಅವಶ್ಯವಿರುವ ಕೌಶಲ್ಯಗಳನ್ನು ಗುರುತಿಸುವುದು ಮತ್ತು ಆ ಪ್ರಕಾರವಾಗಿ ಕರ್ನಾಟಕದ ಕೌಶಲ್ಯ ತರಬೇತಿ ಕೇಂದ್ರಗಳಿಗೆ ಮಾಹಿತಿ ನಿಡುವುದು.
- ವೃತ್ತಿಪರ ಸಂಸ್ಥೆಗಳು ಮತ್ತು ಖಾಸಗಿ ವಲಯದೊಂದಿಗೆ ಸಮಾಲೋಚಿಸಿ ಕೌಶಲ್ಯಾ ಅಭಿವೃದ್ಧಿ ಮತ್ತು ಕೌಶಲ್ಯಗಳ ಉನ್ನತೀಕರಣ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದು ಮತ್ತು ವಿದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಕೈಗೊಳ್ಳುವುದನ್ನು, ವಿಶೇಷವಾಗಿ ಅಂತಾರಾಷ್ಟ್ರೀಯ ವಿದ್ಯಾರ್ಹತೆಗಳನ್ನು, ಉತ್ತೇಜಿಸುವುದು.
- ಕರ್ನಾಟಕದಿಂದ ವಿದೇಶಗಳಿಗೆ ತೆರಳುವ ವಿವಿಧ ವರ್ಗದ ಕಾರ್ಮಿಕರಿಗೆ ವಿದೇಶಕ್ಕೆ ತೆರಳುವ ಮುನ್ನ (pre exit) ಪೂರ್ವ ಪರಿಚಯ ಕಾರ್ಯಾಗಾರ(Orientation Program) ಕಾರ್ಯಕ್ರಮಗಳನ್ನು ಪ್ರಾರಂಭಿಸುವುದು.

- ಅಂತಿಮ ಕೊರತೆ ತುಂಬುವ ಸಹಾಯ ಒದಗಿಸಲು ಯೋಜನಾ ಮಾನವ ಸಂಪನ್ಮೂಲ ಸರಬರಾಜುದಾರರು ಹಾಗೂ ವಿದೇಶಿ ಉದ್ಯೋಗದಾತರನ್ನೊಳಗೊಂಡಂತೆ ಇತರ ಉದ್ಯೋಗ–ಪ್ರೋತ್ಸಾಹಕ ಸಂಸ್ಥೆಗಳೊಡನೆ ಸಹಕರಿಸುವುದು ಮತ್ತು ಯುವಕರಿಗೆ ಮಾಹಿತಿ ನೀಡುವ ಮೂಲಕ ಸಹಾಯ ಮಾಡುವುದು.
- ವ್ಯಾಸಂಗ, ಅಂತಾರಾಷ್ಟ್ರೀಯ ಕಾರ್ಮಿಕ ಮಾರುಕಟ್ಟೆಯ ಒಲವು ಮತ್ತು ಬಲಾಬಲಗಳ ದೇಖರೇಖಿ ಮತ್ತು ವಿಶ್ಲೇಷಣೆ, ಭಾರತ ಹಾಗೂ ವಿದೇಶಗಳಲ್ಲಿ ಭಾರತೀಯ ವಲಸೆ ಕಾರ್ಮಿಕರು ಎದುರಿಸುವ ಸಮಸ್ಯೆಗಳು, ಇತರ ಕಾರ್ಮಿಕ ರಫ್ತು ದೇಶಗಳು ಅನುಸರಿಸುವ ಅತ್ಯುತ್ತಮ ವಿಧಾನಗಳನ್ನು ಸಾಕ್ಷಿಕಲ್ಲಾಗಿ ಮಾಡುವುದು (Bench Marking)–ಇವುಗಳನ್ನು ಬೆಂಬಲಿಸಿ, ಪ್ರಾರಂಭಿಸುವುದು ಮತ್ತು ನೀತಿ ನಿರೂಪಣೆ/ ಕಾರ್ಯತಂತ್ರಗಳನ್ನು ಶಿಫಾರಸು ಮಾಡುವುದು.
- ಬೇಕಾದ ಉದ್ದೇಶಗಳಿಗೆ ಸಾಂಘಿಕ ಹಿತರಕ್ಷಣಾ ನಿಧಿ ರಚನೆಯನ್ನೊಳಗೊಂಡಂತೆ ಕರ್ನಾಟಕದ ಸಾಗರೋತ್ತರ ಕಾರ್ಮಿಕರಿಗೆ ಬೇಡಿಕೆಯಾಧರಿತ ಬೆಂಬಲವನ್ನು ಒದಗಿಸುವುದು.
- ಸಾಗರೋತ್ತರ ಉದ್ಯೋಗ ಮಾರುಕಟ್ಟೆಯಲ್ಲಿನ ಅವಕಾಶಗಳ ಮಾಹಿತಿಯನ್ನು ಕನ್ನಡಿಗರಿಗೆ ತಲುಪಿಸಲು/ ಹರಡಲು ಕರ್ನಾಟಕದ ಅನಿವಾಸಿ ಭಾರತೀಯ ಸಮಿತಿಯು ಎಲ್ಲಾ ಜಿಲ್ಲೆಗಳಲ್ಲಿಯೂ ನಿಯಮಿತವಾಗಿ ಪ್ರಚಾರ ಮಾಡುವುದು, ಕೌಶಲ್ಯಾಭಿವೃದ್ಧಿ ಮಾಡುವುದು ಮತ್ತು ನಿರ್ಗಮನ–ಪೂರ್ವ ತರಬೇತಿಯೊಂದಿಗೆ ಕನ್ನಡಿಗರು ಸಾಗರೋತ್ತರ ಉದ್ಯೋಗಗಳನ್ನು ಪಡೆಯುವಂತೆ ಪ್ರೋತ್ಸಾಹಿಸುವುದು.

ಸಾಗರೋತ್ತರ ಉದ್ಯೋಗಾಕಾಂಕ್ಷಿಗಳ ಶೈಕ್ಷಣಿಕ ದಾಖಲೆಗಳ ದೃಢೀಕರಣ, ಪಾರ್ಶ್ವ ಟಿಪ್ಪಣಿಗಳ ದೃಢೀಕರಣ, ನಿರ್ಗಮನ ಪೂರ್ವ ಸೂಚನೆ ನೀಡಿಕೆ, ಇ–ವಲಸೆ ವ್ಯವಸ್ಥೆಯ ಮೂಲಕ ವಲಸೆ ರಕ್ಷಣಾ ಅಧಿಕಾರಿ ಕಚೇರಿಯ ವಲಸೆ ಪರೀಕ್ಷೆ ಅನುಮತಿ ಕೊಡಿಸುವಂತಹ ಸಹಾಯಗಳನ್ನು ಒದಗಿಸಲು ಜಿಲ್ಲಾ ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಹಿತರಕ್ಷಣಾ ಸಮಿತಿಯನ್ನು ಜಾಗೃತಗೊಳಿಸಲಾಗುವುದು.

### 6.7.2. ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಬೆಂಬಲ ಸೇವಾ ಕೇಂದ್ರ

ವಿದೇಶಗಳಲ್ಲಿ ಉದ್ಯೋಗಾಕಾಂಕ್ಷಿ ಕಾರ್ಮಿಕರಿಗೆ ಅನುಕೂಲ ಮತ್ತು ಬೆಂಬಲ ಸೇವೆಗಳನ್ನು ಒದಗಿಸಲು ಭಾರತ ಸರ್ಕಾರದ ವಿದೇಶಾಂಗ ಸಚಿವಾಲಯದ ಅಧೀನದಲ್ಲಿ ಭಾರತ ವಲಸೆ ಕೇಂದ್ರ (ICM), ಸಾಗರೋತ್ತರ ಕಾರ್ಮಿಕರ ಸಂಪನ್ಮೂಲ ಕೇಂದ್ರ (OWRC) ವಲಸಿಗರ ಸಂಪನ್ಮೂಲ ಕೇಂದ್ರ (IRC) ಮತ್ತು ಭಾರತೀಯ ಕಾರ್ಮಿಕರ ಸಂಪನ್ಮೂಲ ಕೇಂದ್ರ (IWRC)ಗಳೊಡನೆ ಸಹಯೋಗ ಹೊಂದಲು ಉದ್ದೇಶಿಸಲಾಗಿದೆ.

24 x 7 x 365 ಅವಧಿಯಲ್ಲಿ ಕೆಲಸ ಮಾಡುವ ಭಾರತದಲ್ಲಿನ ಕಾರ್ಮಿಕರಿಗೆ 1800–11–3090 ಮತ್ತು ಭಾರತೀಯ ಸಾಗರೋತ್ತರ ವಲಸೆ ಕಾರ್ಮಿಕರಿಗೆ +91–124–2341002 ಉಚಿತ ಸಹಾಯವಾಣಿಗಳ ಮೂಲಕ 11 ಭಾರತೀಯ ಭಾಷೆಗಳಲ್ಲಿ (ಕನ್ನಡ, ತೆಲುಗು, ತಮಿಳು, ಮಲೆಯಾಳಿ, ಮರಾಠಿ, ಒಡಿಯಾ, ಗುಜರಾತಿ, ಪಂಜಾಬಿ, ಹಿಂದಿ ಮತ್ತು ಇಂಗ್ಲಿಷ್) ಸಂದೇಹ ಪರಿಹಾರ ಮಾಡಲು ಅನಿವಾಸಿ ಭಾರತೀಯರ/ ಅನಿವಾಸಿ



ಕರ್ನಾಟಕದ ಅನಿವಾಸಿ ಭಾರತೀಯ ನೀತಿ

ಕನ್ನಡಿಗರ ಸಮಿತಿಯು ಸಾಗರೋತ್ತರ ಕಾರ್ಮಿಕರ ಸಂಪನ್ಮೂಲ ಕೇಂದ್ರದೊಂದಿಗೆ ಸಹಕಾರ ನೀಡುವುದು.

**ಸಾಗರೋತ್ತರ ಕಾರ್ಮಿಕರ ಸಂಪನ್ಮೂಲ ಕೇಂದ್ರ/ ವಲಸೆಗಾರರ ಸಂಪನ್ಮೂಲ ಕೇಂದ್ರಗಳ ಸಹಕಾರದೊಂದಿಗೆ ಈ ಕೆಳಗಿನ ಅಂಶಗಳಿಗೆ ಅನಿವಾಸಿ ಭಾರತೀಯ ಸಮಿತಿಯು ಏಕ ಗವಾಕ್ಷಿ ಮೂಲದಂತೆ ಕೆಲಸ ಮಾಡಲಿದೆ:**

- ದೂರು/ ದುಮ್ಮಾನಗಳು, ಕುಂದು/ ಕೊರತೆಗಳು, ಕಷ್ಟ/ ನಿಷ್ಠುರಗಳನ್ನು ನೋಂದಾಯಿಸಿಕೊಳ್ಳುವುದು, ಅವುಗಳಿಗೆ ಪ್ರತಿಕ್ರಿಯೆ ನೀಡುವುದು ಮತ್ತು ಮುಂಜಾಗರೂಕತೆ ವಹಿಸುವುದು.
- ವಲಸೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಣೆ ಮತ್ತು ತಿಳಿವಳಿಕೆ ಕೇಂದ್ರ ಹಾಗೂ ಸಲಹಾ ಕೇಂದ್ರಗಳ ಮೂಲಕ ಮಾಹಿತಿ ಪ್ರಸರಣೆ.
- ವಲಸಿಗರಿಗೆ ಸುಲಭ ಪ್ರವೇಶ (Walk in) ದ ಸಲಹಾ ಕೇಂದ್ರಗಳು.
- ವಲಸೆ ಆಕಾಂಕ್ಷಿಗಳಿಗೆ ಮತ್ತು ಸಾಗರೋತ್ತರ ಕಾರ್ಮಿಕರಿಗೆ, ಸಾಗರೋತ್ತರ ಉದ್ಯೋಗಗಳ ಎಲ್ಲಾ ಅಂಶಗಳ ಬಗ್ಗೆಯೂ ಮಾಹಿತಿ ಮತ್ತು ಸಹಾಯಗಳನ್ನು ಒದಗಿಸುವ ಸಾಂಸ್ಥಿಕ ವ್ಯವಸ್ಥೆಯಂತೆ ಕೆಲಸ ಮಾಡುವುದು.

### 67.3 ಕಾನೂನು ಸಹಾಯ ಕೇಂದ್ರ

ಉದ್ಯೋಗದ ಆಶ್ವಾಸನೆ ನೀಡುವ ಸಂಸ್ಥೆಗಳಿಂದ ನಡು ನೀರಿನಲ್ಲಿ ಕೈಬಿಡುವಿಕೆ, ಲಘು ಅಪರಾಧಗಳಿಗಾಗಿ ಬಂಧನ, ದೌರ್ಜನ್ಯ, ಪೀಡನೆ, ಸಾಗರೋತ್ತರ ಉದ್ಯೋಗಿ ಪತಿಯಿಂದ ಪರಿತ್ಯಾಗ ಇತ್ಯಾದಿ ಸಮಸ್ಯೆಗಳಿಗೆ ಸಿಕ್ಕಿಕೊಂಡಿರುವ ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರಿಗೆ ಸಾಧ್ಯವಿರುವ ಎಲ್ಲಾ ರೀತಿಯ ಕಾನೂನು ಸೇವಾ ಸೌಲಭ್ಯಗಳನ್ನು ವಿದೇಶಾಂಗ ಸಚಿವಾಲಯದ ಸಹಯೋಗದೊಂದಿಗೆ ಹಾಗೂ ಕರ್ನಾಟಕ ಕಾನೂನು ಪ್ರಾಧಿಕಾರದ ಸಮಾಲೋಚನೆಯೊಂದಿಗೆ ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಸಮಿತಿಯು ಒದಗಿಸುತ್ತದೆ.

ಹಲವಾರು ಕಾನೂನಾತ್ಮಕ, ಆಸ್ತಿ ಹಾಗೂ ವಾಣಿಜ್ಯ ಸಂಬಂಧಿ ವ್ಯಾಜ್ಯಗಳಲ್ಲಿ ಅನಿವಾಸಿ ಭಾರತೀಯರಿಗೆ/ ಅನಿವಾಸಿ ಕನ್ನಡಿಗರಿಗೆ ಅನುಕೂಲ ಕಲ್ಪಿಸಲು ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಸಮಿತಿಯು ಸಲಹೆಗಾರರ ಮತ್ತು ಮಾರ್ಗದರ್ಶಕರ ಪಟ್ಟಿಯನ್ನು ಸಿದ್ಧಪಡಿಸುತ್ತದೆ.

### 6.7.4 ವಲಸೆ ಕಾರ್ಮಿಕರಿಗೆ ಹಿತರಕ್ಷಣಾ ಸೇವೆಗಳು

ಗಣನೀಯ ಸಂಖ್ಯೆಯ ಭಾರತೀಯ ವಲಸಿಗರಿರುವ ದೇಶಗಳ 43 ಭಾರತೀಯ ನಿಯೋಗಗಳಲ್ಲಿ ಸಕ್ರಿಯವಾಗಿರುವ ಭಾರತೀಯ ಸಮುದಾಯ ಹಿತರಕ್ಷಣಾ ನಿಧಿ (ICWF)ಯ ಮೂಲಕ ವಿದೇಶಾಂಗ ಸಚಿವಾಲಯದ ಜೊತೆಗೂಡಿ ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಸಮಿತಿಯು ಅತಿಥಿ ದೇಶಗಳ ವಂಚಕ ಮಧ್ಯವರ್ತಿ ಗಳಿಂದ ಮೋಸಹೋದವರಿಗೆ, ಓಡಿಬಂದ ಮನೆಗೆಲಸದವರಿಗೆ,

ಅಪಘಾತಗಳಿಗೆ ಬಲಿಯಾದವರಿಗೆ, ತುರ್ತು ಸಹಾಯದ ಅವಶ್ಯಕತೆಯಿರುವ ಅಧಿಕೃತ ದಾಖಲೆಗಳಿಲ್ಲದ ಸಾಗರೋತ್ತರ ಕಾರ್ಮಿಕರಿಗೆ ಅಥವ ಸಮಸ್ಯೆಗಳಿಗೆ ಸಿಲುಕಿದ ಬೇರೆ ಯಾವುದೇ ಭಾರತೀಯ ನಾಗರಿಕರಿಗೆ ಆರ್ಥಿಕ ಸಹಾಯವನ್ನು ನೀಡುವುದು.

ಸಾಗರೋತ್ತರ ದೇಶಗಳಲ್ಲಿ ನೆಲೆಸಿರುವ ಅನಿವಾಸಿ ಭಾರತೀಯರ ಮೃತದೇಹವನ್ನು ಭಾರತಕ್ಕೆ ತರಲು ಅವರ ಉದ್ಯೋಗದಾತ ಪ್ರಾಯೋಜಕರು ಒಪ್ಪದಿದ್ದಲ್ಲಿ ಅಥವ ಒಪ್ಪಂದದ ಮೇರೆಗೆ ಅದು ಸಾಧ್ಯವಿಲ್ಲದಿದ್ದಲ್ಲಿ ಮತ್ತು ಮೃತನ ಕುಟುಂಬದವರಿಗೆ ಆ ವಾಯು ಸಾಗಣೆ ವೆಚ್ಚವನ್ನು ಭರಿಸಲು ಸಾಧ್ಯವಿಲ್ಲದಿದ್ದಲ್ಲಿ, ಸಾಕ್ಷಿ-ಪ್ರಮಾಣೀಕರಣದ ಆಧಾರದಲ್ಲಿ ನಿಯೋಗದ ಮುಖ್ಯಸ್ಥರ ಅಥವ ಸ್ಥಳೀಯ ಸ್ಮಶಾನಾಧಿಕಾರಿಗಳ ಶಿಫಾರಸಿನ ಮೇಲೆ, ಅಂತಹ ವೆಚ್ಚಗಳಿಗೂ ಸಹ ಭಾರತೀಯ ಸಮುದಾಯ ಹಿತರಕ್ಷಣಾ ನಿಧಿಯನ್ನು ಬಳಸಿಕೊಳ್ಳಲಾಗುವುದು.

ವಲಸೆ ಪರೀಕ್ಷೆ ಬೇಕಿರುವಂತಹ (Immigration Clearance Required) ದೇಶಗಳಲ್ಲಿ ಮೃತರಾದ ವಲಸಿಗರ ಮೃತದೇಹವನ್ನು ಭಾರತಕ್ಕೆ ತರಲು ಅವರ ಕುಟುಂಬದ ಸದಸ್ಯರು ಕ್ಷಿಪ್ರ ಸೇವೆಗಾಗಿ ಅಂತರ್ಜಾಲದಲ್ಲಿ ಅರ್ಜಿ ವಿವರಗಳನ್ನು ತುಂಬಲು ಮತ್ತು ನಂತರ ಮೃತರ ಮೃತ ದೇಹವನ್ನು ನಿಗದಿತ ಸ್ಥಳ ತಲುಪುವವರೆಗೂ ಅಂತರ್ಜಾಲದಲ್ಲಿ ಅದರ ಸಾಗಣೆಯ ಜಾಡು ಹಿಂಬಾಲಿಸುವ (Online Tracking) ಕುರಿತು ಸಹಾಯ ಒದಗಿಸಲು ಮತ್ತು ಸುದ್ದಿ ಪ್ರಕಟಿಸಲು ಜಿಲ್ಲಾ ಮಟ್ಟದ ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಹಿತರಕ್ಷಣಾ ಸಮಿತಿಯನ್ನು ಜಾಗೃತಗೊಳಿಸಲಾಗುವುದು.

### 6.7.5 ಮಾತೃಭೂಮಿಗೆ ಮರಳುವ ಅನಿವಾಸಿ ಕನ್ನಡಿಗರಿಗೆ ಹಿತರಕ್ಷಣಾ ಸೇವೆಗಳು

ತಮ್ಮ ಮಾತೃಭೂಮಿಗೆ ಶಾಶ್ವತವಾಗಿ ಸ್ಥಳಾಂತರಗೊಳ್ಳುವ ಅನಿವಾಸಿ ಕನ್ನಡಿಗರಿಗೆ ಸಾಧ್ಯವಿರುವ ಎಲ್ಲಾ ಸಹಾಯಗಳನ್ನೂ, ವಸತಿ ದಾಖಲಾತಿಗಳು, ತೆರಿಗೆ ಸಂಬಂಧಿತ ತೊಡಕುಗಳು, ಅನಿವಾಸಿಗಳ ವಿದೇಶಿ ಹಣಕಾಸು ವಿವಾದಾಂಶಗಳು ಮುಂತಾದವುಗಳ ಬದಲಾವಣೆಯಲ್ಲಿ ಬೇಕಾದ ಸಹಾಯಗಳನ್ನು ಜಿಲ್ಲಾ ಅನಿವಾಸಿ ಕನ್ನಡಿಗರ ಹಿತರಕ್ಷಣಾ ಸಮಿತಿಯೊಂದಿಗೆ ರಾಜ್ಯದ ಅನಿವಾಸಿ ಕನ್ನಡಿಗರ ಸಮಿತಿಯು ಸಹಕರಿಸುತ್ತದೆ.

### 6.7.6 ಕರ್ನಾಟಕದ ದೆಹಲಿ ನಿವಾಸಿ ಆಯುಕ್ತರು

ದೆಹಲಿಯಲ್ಲಿರುವ ಭಾರತ ಸರ್ಕಾರದ ವಿದೇಶಾಂಗ ಸಚಿವಾಲಯ ಮತ್ತು ಇತರ ಸಚಿವಾಲಯಗಳು/ ಇಲಾಖೆಗಳೊಂದಿಗೆ ವಿಶ್ವದೆಲ್ಲೆಡೆಯ ಅನಿವಾಸಿ ಕನ್ನಡಿಗರು ತುರ್ತಾಗಿ ಸ್ಪಂದಿಸಬೇಕಾದ ಕುಂದುಕೊರತೆಗಳನ್ನು ಕರ್ನಾಟಕ ಅನಿವಾಸಿ ಭಾರತೀಯ ಸಮಿತಿಯು ಒದಗಿಸುತ್ತದೆ. ಮತ್ತು ವ್ಯವಹರಿಸಬೇಕಾದ ವಿಷಯಗಳಲ್ಲಿ ಅನಿವಾಸಿ ಭಾರತೀಯ ನೀತಿಯು ಗಾಢ ಮತ್ತು ಸಾಂಸ್ಥಿಕ ರೂಪದ ಸಂಬಂಧವನ್ನು ಹೊಂದುವ ದೃಷ್ಟಿಯನ್ನು ಒಳಗೊಂಡಿದೆ. ಅನಿವಾಸಿ ಭಾರತೀಯ ನೀತಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿಯೂ ಕರ್ನಾಟಕದ ದೆಹಲಿ ನಿವಾಸಿ ಆಯುಕ್ತರ ಕಚೇರಿಯು ಕರ್ನಾಟಕ ಅನಿವಾಸಿ ಭಾರತೀಯ ಸಮಿತಿಗೆ ಸಹಾಯ ಒದಗಿಸುತ್ತದೆ.





## 7. ಅನುಷ್ಠಾನ, ಪುನರ್ಪರಿಶೀಲನೆ ಮತ್ತು ಪರಿಶೀಲನಾ ವ್ಯವಸ್ಥೆ

### 7.1 ಉನ್ನತ ಮಟ್ಟದ ಇಲಾಖಾ ಪರಿಶೀಲನಾ ಸಮಿತಿ:

ಅನಿವಾಸಿ ಭಾರತೀಯ ನೀತಿಯ ಎಲ್ಲ ವಿಧಿಗಳ ಅನುಷ್ಠಾನದ ಪ್ರಗತಿ ಪರಿಶೀಲನೆಯನ್ನು ನಿಯಮಿತವಾಗಿ ಮಾಡಲು ಕರ್ನಾಟಕ ಅನಿವಾಸಿ ಭಾರತೀಯ ಸಮಿತಿಯ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ, ಸರ್ಕಾರದ ಆಯಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳು, ಪ್ರಾದೇಶಿಕ ಪಾಸ್‌ಪೋರ್ಟ್‌ಅಧಿಕಾರಿ, ಕರ್ನಾಟಕ ದೆಹಲಿ ನಿವಾಸಿ ಆಯುಕ್ತರನ್ನೊಳಗೊಂಡ ಒಂದು ಉನ್ನತ ಮಟ್ಟದ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ.

ಅನಿವಾಸಿ ಭಾರತೀಯ ನೀತಿಗೆ ಸಂಬಂಧಿಸಿದ ವಿವಿಧ ಇಲಾಖೆಗಳ ಸರ್ಕಾರಿ ಆಜ್ಞೆಗಳ ತ್ವರಿತ ವಿಲೇವಾರಿಯನ್ನು ಈ ಸಮಿತಿಯು ಖಾತ್ರಿಪಡಿಸುತ್ತದೆ.

ಅನಿವಾಸಿ ಭಾರತೀಯ ನೀತಿಯ ಸುಗಮ ಅನುಷ್ಠಾನಕ್ಕಾಗಿ ಸಮಿತಿಯು ಅವಶ್ಯವಿದಲ್ಲಿ ಮಧ್ಯಂತರ ತಿದ್ದುಪಡಿಗಳು, ಶಿಫಾರಸುಗಳನ್ನು ಮಾಡುತ್ತದೆ.

ಅವಶ್ಯಕ ಅಧಿಕಾರಯುತ ಆಜ್ಞೆಗಳನ್ನು ಹೊರಡಿಸುವಲ್ಲಿ ಸಹಕರಿಸಲು, ಎಲ್ಲಾ ಸರ್ಕಾರಿ ಇಲಾಖೆಗಳೊಂದಿಗೂ ವ್ಯವಹರಿಸುವ ಮತ್ತು ಉನ್ನತ ಮಟ್ಟದ ಇಲಾಖಾ ಪರಿಶೀಲನಾ ಸಮಿತಿಯ ಕಚೇರಿಯಂತೆ ಕೆಲಸ ಮಾಡುವ ಕರ್ನಾಟಕ ಅನಿವಾಸಿ ಭಾರತೀಯ ಸಮಿತಿಯು ನೀತಿಯನ್ನು ಅನುಷ್ಠಾನಗೊಳಿಸುತ್ತದೆ.

ಈ ನೀತಿಯ ಉಪಕ್ರಮಗಳ ಪರಿಣಾಮವನ್ನು ಅಳೆಯಲು ಪ್ರಖ್ಯಾತ ಸಂಸ್ಥೆಗಳೊಡನೆ ಅನಿವಾಸಿ ಭಾರತೀಯ ಸಮಿತಿಯು ಸಂಶೋಧನೆ, ಅಧ್ಯಯನ, ಸಮೀಕ್ಷೆ ಇತ್ಯಾದಿಗಳನ್ನು ನಡೆಸುತ್ತದೆ ಮತ್ತು ನೀತಿ ಹಾಗೂ ಅದರ ಅನುಷ್ಠಾನದ ಬಗ್ಗೆ ಸಂಬಂಧಿತ ಪ್ರತಿಕ್ರಿಯೆಗಳನ್ನೂ ನೀಡುತ್ತದೆ.

### 7.2 ನೀತಿಯ ಅವಧಿ

ಈ ಅನಿವಾಸಿ ಭಾರತೀಯ ನೀತಿಯು ಅಂಗೀಕಾರವಾದ ದಿನದಿಂದ 5 ವರ್ಷಗಳವರೆಗೆ ಅಥವ ಸರ್ಕಾರವು ಹೊಸ ನೀತಿಯನ್ನು ಪ್ರಕಟಿಸುವವರೆಗೆ ಜಾರಿಯಲ್ಲಿರುತ್ತದೆ.

**ವ್ಯಾಖ್ಯೆಗಳು:**

**ಅನಿವಾಸಿ ಭಾರತೀಯ** (NRI): ಉದ್ಯೋಗ, ವಾಸ, ಶಿಕ್ಷಣ ಅಥವ ಇನ್ನಿತರ ಯಾವುದೇ ಕಾರಣಕ್ಕಾಗಿ 6 ತಿಂಗಳು ಅಥವಾ ಹೆಚ್ಚಿನ ಅವಧಿಗೆ ಇನ್ನೊಂದು ದೇಶಕ್ಕೆ ತಾತ್ಕಾಲಿಕವಾಗಿ ವಲಸೆ ಹೋಗುವ ಯಾವುದೇ ಭಾರತೀಯ ಪ್ರಜೆ ಹಾಗೂ ಭಾರತದ ಪಾಸ್‌ಪೋರ್ಟ್ ಹೊಂದಿದ ವ್ಯಕ್ತಿಯನ್ನು ಅನಿವಾಸಿ ಭಾರತೀಯ ಎನ್ನಲಾಗುತ್ತದೆ.

**ಅನಿವಾಸಿ ಕನ್ನಡಿಗ** (NRK): ಉದ್ಯೋಗ, ವಾಸ, ಶಿಕ್ಷಣ ಅಥವ ಇನ್ನಿತರ ಯಾವುದೇ ಕಾರಣಕ್ಕಾಗಿ 6 ತಿಂಗಳು ಅಥವ ಹೆಚ್ಚಿನ ಅವಧಿಗೆ ಇನ್ನೊಂದು ದೇಶಕ್ಕೆ ತಾತ್ಕಾಲಿಕವಾಗಿ ವಲಸೆ ಹೋಗುವ, ಕರ್ನಾಟಕದಲ್ಲಿ ಶಾಶ್ವತವಾಗಿ ನೆಲೆಸಿರುವ, ಭಾರತದ ಪಾರ್ಸ್‌ಪೋರ್ಟ್ ಹೊಂದಿರುವ ಯಾವುದೇ ಭಾರತೀಯ ಪ್ರಜೆಯನ್ನು ಅನಿವಾಸಿ ಕನ್ನಡಿಗ ಎನ್ನಲಾಗುತ್ತದೆ.

**ಭಾರತೀಯ ಮೂಲದ ವ್ಯಕ್ತಿ** (PIO): ಭಾರತ ಮೂಲದ ಅಥವಾ ಭಾರತೀಯ ಪೂರ್ವಿಕರ ಸಂಬಂಧಿ, ಆದರೆ ಭಾರತದ ಪ್ರಜೆಯಲ್ಲದ ಯಾವುದೇ ವ್ಯಕ್ತಿಯನ್ನು ಭಾರತೀಯ ಮೂಲದ ವ್ಯಕ್ತಿ ಎನ್ನಲಾಗುತ್ತದೆ. ಭಾರತೀಯ ಮೂಲದ ವ್ಯಕ್ತಿಯು ಒಂದೊಮ್ಮೆ ಭಾರತದ ಪ್ರಜೆಯಾಗಿದ್ದು, ನಂತರ ಬೇರೊಂದು ದೇಶದ ನಾಗರಿಕತೆಯನ್ನು ಪಡೆದುಕೊಂಡಿರಬಹುದು ಅಥವ ಆತನ ಪೂರ್ವಿಕರು ಭಾರತದ ಯಾವುದೇ ರಾಜ್ಯದಲ್ಲಿ ಜನಿಸಿದ್ದಿರಬಹುದು.





## ಕರ್ನಾಟಕ ಸರ್ಕಾರದ ನಡಾವಳಿಗಳು

**ವಿಷಯ** : 'ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ'ದ ರಚನೆ

**ಓದಲಾಗಿದೆ** : ಮಾನ್ಯ ಮುಖ್ಯಮಂತ್ರಿಯವರ 2008-09ನೇ ಸಾಲಿನ ಆಯವ್ಯಯ ಭಾಷಣ

**ಪ್ರಸ್ತಾವನೆ:**

ಮಾನ್ಯ ಮುಖ್ಯ ಮಂತ್ರಿಯವರು, 2008-09ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಅನಿವಾಸಿ ಕನ್ನಡಿಗರ ವಿಶೇಷ ಘಟಕ (ಎನ್.ಆರ್.ಕೆ. ಸೆಲ್) ಸ್ಥಾಪನೆ ಮಾಡುವುದಾಗಿ ತಿಳಿಸಿರುತ್ತಾರೆ. ಈ ಘಟಕವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರೀತಿಯಲ್ಲಿ ಘೋಷಿಸಲಾಗಿದೆ (2008-09ರ ಆಯವ್ಯಯ ಭಾಷಣದ ಪುಸ್ತಕದ ಪುಟ ಸಂಖ್ಯೆ 20). ಇದರ ವ್ಯಾಪ್ತಿಯನ್ನು ವಿಸ್ತಾರಗೊಳಿಸುವ ದೃಷ್ಟಿಯಿಂದ ಹಾಗೂ ಆಡಳಿತ ನಿರ್ವಹಣೆಯ ದೃಷ್ಟಿಯಿಂದ "ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ" ಎಂದು ಸ್ಥಾಪಿಸಲು ನಿರ್ಧರಿಸಿದೆ. ಈ ಸಮಿತಿಯನ್ನು ಮಾನ್ಯ ಮುಖ್ಯ ಮಂತ್ರಿಯವರ ನೇರ ನಿಯಂತ್ರಣಕ್ಕೆ ಒಳಪಡಿಸಬೇಕಾಗಿರುವುದರಿಂದ, ಇದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವುದೆಂದು ತೀರ್ಮಾನಿಸಲಾಗಿದೆ.

ಪ್ರಸ್ತುತ, ಕೇಂದ್ರ ಸರ್ಕಾರ ಮತ್ತು ಇತರ ರಾಜ್ಯಗಳಲ್ಲಿ ಅನಿವಾಸಿ ಭಾರತೀಯರಿಗಾಗಿ ಇರುವ ವಿಭಾಗದ ಮಾದರಿಯಲ್ಲಿ ಕರ್ನಾಟಕ ಸರ್ಕಾರವು "ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ"ವನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಈ ಸಮಿತಿಯ ಮೂಲಕ ಈ ಕೆಳಕಂಡ ಕ್ಷೇತ್ರಗಳಲ್ಲಿ ಅನಿವಾಸಿ ಭಾರತೀಯರಿಗೆ ವೇದಿಕೆಯನ್ನು ಒದಗಿಸಲು ಉದ್ದೇಶಿಸಿದೆ:

1) ಹೊರದೇಶಗಳಲ್ಲಿ ನೆಲೆಸಿರುವ ಕರ್ನಾಟಕದ ಜನರ ಹಿತಾಸಕ್ತಿಗಳಿಗೆ ಪೂರಕವಾದ ಎಲ್ಲಾ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು;

2) ಹೊರದೇಶಗಳಲ್ಲಿನ ಕರ್ನಾಟಕದ ಜನರು ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಬೆಳೆಸಿಕೊಂಡು ಅಭಿವೃದ್ಧಿಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಅವಕಾಶ ಕಲ್ಪಿಸಲು ಸಹಕರಿಸುವುದು;

3) ಅನಿವಾಸಿ ಭಾರತೀಯರ ಸಹಕಾರದೊಂದಿಗೆ ರಾಜ್ಯದಲ್ಲಿನ ಐ.ಟಿ./ ಬಿ.ಟಿ./ ವಿಜ್ಞಾನ/ ತಂತ್ರಜ್ಞಾನ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಹೆಚ್ಚಿನ ಅಭಿವೃದ್ಧಿ ಸಾಧಿಸಲು ಅಗತ್ಯವಿರುವ ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು;

4) ಅನಿವಾಸಿ ಭಾರತೀಯರನ್ನು ರಾಜ್ಯದಲ್ಲಿನ ಶೈಕ್ಷಣಿಕ ಹಾಗೂ ಇನ್ನಿತರ ಕ್ಷೇತ್ರಗಳ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು;

5) ಅನಿವಾಸಿ ಭಾರತೀಯರಿಂದ ರಾಜ್ಯದಲ್ಲಿನ ಕೈಗಾರಿಕೆಗಳಲ್ಲಿ ಮತ್ತು ಮೂಲಭೂತ ಸೌಕರ್ಯಗಳಲ್ಲಿ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸುವುದು;

6) ಅನಿವಾಸಿ ಭಾರತೀಯರನ್ನು ರಾಜ್ಯದ ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸುವುದು;

7) ಅನಿವಾಸಿ ಭಾರತೀಯರ ಹಿತಾಸಕ್ತಿಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು.

ಇದರ ಜೊತೆಗೆ ಅನಿವಾಸಿ ಭಾರತೀಯರಿಗೆ ವಿವಿಧ ಕ್ಷೇತ್ರಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಭಾಗವಹಿಸಲು ಅನುವಾಗುವಂತೆ ಅವಕಾಶಗಳನ್ನು ಕಲ್ಪಿಸುವುದು ಅವಶ್ಯಕವಾಗಿದೆ.

ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ, ಇದು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕಾಗಿರುವುದರಿಂದ, ಅದಕ್ಕೆ ಸ್ವಾಯತ್ತ ಸಂಸ್ಥೆಯ ಸ್ಥಾನಮಾನ ನೀಡಲಾಗುವುದು. ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಮುಖ್ಯಸ್ಥರನ್ನೊಳಗೊಂಡಂತೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ ವ್ಯಕ್ತಿಗಳನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ರಚಿಸಲು ಉದ್ದೇಶಿಸಲಾಗಿದೆ.

ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ, ಇದು ಪ್ರಸಕ್ತ ಸಾಲಿನಿಂದಲೇ ಕಾರ್ಯ ನಿರ್ವಹಿಸಬೇಕಾಗಿರುವ ಅಗತ್ಯತೆಯನ್ನು ಪರಿಗಣಿಸಿ, ಮೇಲ್ಕಂಡ ಸಮಿತಿ ಸ್ಥಾಪನೆಗೆ ಸಂಬಂಧಿಸಿದಂತೆ ಈ ಕೆಳಕಂಡ ಆದೇಶ ಹೊರಡಿಸಿದೆ:

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 68 ಶಿಸನೇ 2008, ಬೆಂಗಳೂರು, ದಿನಾಂಕ 05.08.2008.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು "ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ"ವನ್ನು ಪ್ರಸಕ್ತ ಹಣಕಾಸು ವರ್ಷದ ಸಾಲಿನಿಂದಲೇ ಸ್ಥಾಪಿಸಲು ಹರ್ಷಿಸುತ್ತದೆ.

2. ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ, ಇದು ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅನುವಾಗುವಂತೆ, ಅದಕ್ಕೆ ಸ್ವಾಯತ್ತ ಸಂಸ್ಥೆಯ ಸ್ಥಾನಮಾನ ನೀಡಲಾಗಿದೆ. ಈ ಸಮಿತಿಯ ಕೇಂದ್ರಸ್ಥಾನವು ಬೆಂಗಳೂರು ನಗರದಲ್ಲಿರತಕ್ಕದ್ದು.

3. ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ "ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ" ಇದು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು:





1. ಮಾನ್ಯ ಮುಖ್ಯ ಮಂತ್ರಿಯವರು, ಕರ್ನಾಟಕ ಸರ್ಕಾರ — ಅಧ್ಯಕ್ಷರು
2. ಮಾನ್ಯ ಮುಖ್ಯ ಮಂತ್ರಿಯವರಿಂದ ನೇಮಿಸಲ್ಪಡುವ ಕರ್ನಾಟಕ ವಿಧಾನ ಮಂಡಲದ ಓರ್ವ ಸದಸ್ಯರು — ಉಪಾಧ್ಯಕ್ಷರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ — ಸದಸ್ಯರು
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ — ಸದಸ್ಯರು
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಐ.ಟಿ., ಬಿ.ಟಿ., ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ — ಸದಸ್ಯರು
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮೂಲಸೌಕರ್ಯ ಸೌಲಭ್ಯ ಇಲಾಖೆ — ಸದಸ್ಯರು
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ — ಸದಸ್ಯರು
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಇಲಾಖೆ — ಸದಸ್ಯರು
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ — ಸದಸ್ಯರು
10. ಸರ್ಕಾರದಿಂದ ನಾಮನಿರ್ದೇಶಿತರಾದ ಅನಿವಾಸಿ ಭಾರತೀಯರ ಒಬ್ಬ ಪ್ರತಿನಿಧಿ — ಸದಸ್ಯರು
11. ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿನ ಪರಿಣಿತರಾದ, ಸರ್ಕಾರದಿಂದ ನಾಮನಿರ್ದೇಶಿತರಾದ ಒಬ್ಬ ವ್ಯಕ್ತಿ — ಸದಸ್ಯರು
12. ಐ.ಟಿ., ಬಿ.ಟಿ., ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪರಿಣಿತರಾದ, ಸರ್ಕಾರದಿಂದ ನಾಮನಿರ್ದೇಶಿತರಾದ ಒಬ್ಬ ವ್ಯಕ್ತಿ — ಸದಸ್ಯರು
13. ಆರ್ಥಿಕ ತಜ್ಞರಾದ, ಸರ್ಕಾರದಿಂದ ನಾಮನಿರ್ದೇಶಿತರಾದ ಒಬ್ಬ ವ್ಯಕ್ತಿ — ಸದಸ್ಯರು
14. ಸಾಮಾಜಿಕ ತಜ್ಞರಾದ, ಸರ್ಕಾರದಿಂದ ನಾಮನಿರ್ದೇಶಿತರಾದ ಒಬ್ಬ ವ್ಯಕ್ತಿ — ಸದಸ್ಯರು
15. ಆಡಳಿತ ತಜ್ಞರಾದ, ಸರ್ಕಾರದಿಂದ ನಾಮನಿರ್ದೇಶಿತರಾದ ಒಬ್ಬ ವ್ಯಕ್ತಿ — ಸದಸ್ಯರು
16. ಅನಿವಾಸಿ ಭಾರತೀಯ ಸಮಿತಿಯ ಕಾರ್ಯದರ್ಶಿ (ಗ್ರೂಪ್ 'ಎ' ಹಿರಿಯ ಶ್ರೇಣಿ ಸದಸ್ಯ ದರ್ಜೆಗೆ ಕಡಿಮೆ ಇಲ್ಲದ ಸರ್ಕಾರದಿಂದ ನೇಮಿಸಲ್ಪಟ್ಟ ಒಬ್ಬ ಅಧಿಕಾರಿ) — ಕಾರ್ಯದರ್ಶಿ

4. "ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ" ಇದರ ಕಾರ್ಯದರ್ಶಿ (ಸದಸ್ಯ ಕಾರ್ಯದರ್ಶಿಯವರು) ಸಮಿತಿಯ ನಿರ್ಣಯ / ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ಹೊಂದಿರುತ್ತಾರೆ.

5. ಈ ಸಮಿತಿಗೆ ಅವಶ್ಯವಿರುವ ಇತರ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ಹುದ್ದೆಗಳ ಸೃಜನೆಗೆ ಪ್ರತ್ಯೇಕ ಆದೇಶ ಹೊರಡಿಸಲಾಗುವುದು.

6. ಸಮಿತಿಯನ್ನು ಈ ಕೆಳಕಂಡ ಧ್ಯೇಯೋದ್ದೇಶಗಳ ಈಡೇರಿಕೆಗಾಗಿ ರಚಿಸಲಾಗಿದೆ:

(1) ಹೊರದೇಶಗಳಲ್ಲಿ ನೆಲೆಸಿರುವ ಕರ್ನಾಟಕದ ಜನರ ಹಿತಾಸಕ್ತಿಗಳಿಗೆ ಪೂರಕವಾದ ಎಲ್ಲಾ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು;

(2) ಹೊರದೇಶಗಳಲ್ಲಿನ ಕರ್ನಾಟಕದ ಜನರು ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಬೆಳೆಸಿಕೊಂಡು ಅಭಿವೃದ್ಧಿಗೊಳಿಸಿಕೊಳ್ಳುವ ನಿಟ್ಟಿನಲ್ಲಿ ಅವಕಾಶ ಕಲ್ಪಿಸಲು ಸಹಕರಿಸುವುದು;

(3) ಅನಿವಾಸಿ ಭಾರತೀಯರ ಸಹಕಾರದೊಂದಿಗೆ ರಾಜ್ಯದಲ್ಲಿನ ಐ.ಟಿ./ ಬಿ.ಟಿ./ ವಿಜ್ಞಾನ/ ತಂತ್ರಜ್ಞಾನ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಹೆಚ್ಚಿನ ಅಭಿವೃದ್ಧಿ ಸಾಧಿಸಲು ಅಗತ್ಯವಿರುವ ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು;

(4) ಅನಿವಾಸಿ ಭಾರತೀಯರನ್ನು ರಾಜ್ಯದಲ್ಲಿನ ಶೈಕ್ಷಣಿಕ ಹಾಗೂ ಇನ್ನಿತರ ಕ್ಷೇತ್ರಗಳ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು;

(5) ಅನಿವಾಸಿ ಭಾರತೀಯರಿಂದ ರಾಜ್ಯದಲ್ಲಿನ ಕೈಗಾರಿಕೆಗಳು ಮತ್ತು ಮೂಲ ಸೌಕರ್ಯಾಭಿವೃದ್ಧಿ ಕ್ಷೇತ್ರಗಳಿಗೆ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸುವುದು;

(6) ಅನಿವಾಸಿ ಭಾರತೀಯರನ್ನು ರಾಜ್ಯದ ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸುವುದು;

(7) ಅನಿವಾಸಿ ಭಾರತೀಯರ ಹಿತರಕ್ಷಣೆಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು.

(8). ಈ ಸಮಿತಿಯು ರಾಜ್ಯ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುವುದು. ಇದಕ್ಕೆ ಸಂಬಂಧಿಸಿದಂತೆ ಕರ್ನಾಟಕ





ಸರ್ಕಾರ (ವ್ಯವಹಾರ ಹಂಚಿಕೆ) ನಿಯಮಗಳು, 1977ಕ್ಕೆ ಸೂಕ್ತ ತಿದ್ದುಪಡಿ ತರಲಾಗುವುದು.

(9). ಈ ಸಮಿತಿಯು ಸ್ವಾಯತ್ತ ಸಂಸ್ಥೆಯಾಗಿ ಕಾರ್ಯ ನಿರ್ವಹಿಸ ಬೇಕಾಗಿರುವುದರಿಂದ, ಸರ್ಕಾರದಿಂದ ವಾರ್ಷಿಕ ಅನುದಾನವನ್ನು ನೀಡಲಾಗುವುದು. ಅನುದಾನದ ವಿವರಗಳನ್ನು ಕುರಿತಂತೆ ಪ್ರತ್ಯೇಕ ಆದೇಶ ಹೊರಡಿಸಲಾಗುವುದು.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು**

**ಅವರ ಹೆಸರಿನಲ್ಲಿ,**

**ಸಹಿ/–**

**(ಎಸ್.ತಿಪ್ಪೇಸ್ವಾಮಿ)**

**ಸರ್ಕಾರದ ಅಧೀನ ಕಾರ್ಯದರ್ಶಿ,**

**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,**

**(ರಾಜ್ಯ ಶಿಷ್ಟಾಚಾರ)**

## ಕರ್ನಾಟಕ ಸರ್ಕಾರದ ನಡಾವಳಿಗಳು

**ವಿಷಯ** : ಕರ್ನಾಟಕದ ಅನಿವಾಸಿ ಭಾರತೀಯ ನೀತಿಯನ್ವಯ ಉನ್ನತ ಮಟ್ಟದ ಇಲಾಖಾ ಪರಿಶೀಲನಾ ಸಮಿತಿಯ ರಚನೆ

**ಓದಲಾಗಿದೆ** : ಸರ್ಕಾರಿ ಆದೇಶ ಸಂಖ್ಯೆ : ಸಿ.ಐ. 207 ಎಸ್.ಪಿ.ಐ. 2016 ದಿ:02.12.2016.

**ಪ್ರಸ್ತಾವನೆ:**

ತಮ್ಮ ಕೌಶಲ್ಯವನ್ನು ವೃದ್ಧಿಸಿಕೊಂಡು ಹೊರದೇಶಗಳ ಕುಶಲಕರ್ಮಿ ಉದ್ಯೋಗಿಗಳ ಕೊರತೆಯನ್ನು ತುಂಬಲು, ಆ ಅವಕಾಶಗಳನ್ನು ಬಳಸಿಕೊಳ್ಳಲು ಕನ್ನಡಿಗರಿಗೆ ಬೆಂಬಲ ನೀಡುವುದಲ್ಲದೆ, ತಾವು ನೆಲೆಸಿರುವ ದೇಶಗಳಲ್ಲಿ ಅಸಾಧಾರಣ ಸಾಧನೆ ಮಾಡಿರುವ ಅನಿವಾಸಿ ಭಾರತೀಯರು/ ಅನಿವಾಸಿ ಕನ್ನಡಿಗರು ತಮ್ಮ ಜ್ಞಾನ, ಶಕ್ತಿ, ಸಾಮರ್ಥ್ಯಗಳನ್ನು ಭಾರತ/ ಕರ್ನಾಟಕಗಳ ಅಭಿವೃದ್ಧಿಗಾಗಿ ಕೊಡುಗೆ ನೀಡುವಂತೆ ಅವರನ್ನು ಪ್ರೇರೇಪಿಸಲು, ಕರ್ನಾಟಕ ಸರ್ಕಾರವು ಮೇಲೆ ಓದಲಾಗಿರುವ ಕರ್ನಾಟಕದ ಅನಿವಾಸಿ ಭಾರತೀಯ ನೀತಿಯನ್ನು ರೂಪಿಸಿ ಘೋಷಿಸಿದೆ.

ಅನಿವಾಸಿ ಭಾರತೀಯ ನೀತಿಯ ಎಲ್ಲ ವಿಧಿಗಳ ಅನುಷ್ಠಾನದ ಪ್ರಗತಿ ಪರಿಶೀಲನೆಯನ್ನು ನಿಯಮಿತವಾಗಿ ಮಾಡಲು ಅನಿವಾಸಿ ಭಾರತೀಯರ ಸಮಿತಿ, ಕರ್ನಾಟಕ ಇದರ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ, ಸರ್ಕಾರದ ಆಯಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳು, ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿ, ಕರ್ನಾಟಕದ ದೆಹಲಿ ನಿವಾಸಿ ಆಯುಕ್ತರನ್ನೊಳಗೊಂಡ ಒಂದು ಉನ್ನತ ಮಟ್ಟದ ಪರಿಶೀಲನಾ ಸಮಿತಿಯನ್ನು ರಚಿಸಲಾಗುವುದು ಎಂದು ಈ ನೀತಿಯಲ್ಲಿ ಹೇಳಲಾಗಿದೆ.

ಆದ್ದರಿಂದ ಸರ್ಕಾರವು ಈ ಕೆಳಕಂಡ ಆದೇಶ ಹೊರಡಿಸಿದೆ:

**ಸರ್ಕಾರಿ ಆದೇಶ ಸಂಖ್ಯೆ : ಸಿ.ಐ. 207 ಎಸ್.ಪಿ.ಐ. 2016 ದಿ:02.12.2016.**

ಮೇಲೆ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಸಮಿತಿ ಕರ್ನಾಟಕ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ, ಒಂದು ಉನ್ನತ ಮಟ್ಟದ ಇಲಾಖಾ ಪರಿಶೀಲನಾ ಸಮಿತಿಯನ್ನು ಈ ಕೆಳಕಂಡಂತೆ ಸ್ಥಾಪಿಸಲು ಹರ್ಷಿಸುತ್ತದೆ:

| | | |
|---|---|---|
| 1. | ಉಪಾಧ್ಯಕ್ಷರು, ಅನಿವಾಸಿ ಭಾರತೀಯರ ಸಮಿತಿ, ಕರ್ನಾಟಕ. | ಅಧ್ಯಕ್ಷರು |
| 2. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | ಸದಸ್ಯರು |
| 3. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ | ಸದಸ್ಯರು |
| 4. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ | ಸದಸ್ಯರು |
| 5. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ ಇಲಾಖೆ | ಸದಸ್ಯರು |
| 6. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಾರ್ಮಿಕ ಇಲಾಖೆ | ಸದಸ್ಯರು |





| | | |
|---|---|---|
| 7. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಐ.ಟಿ., ಬಿ.ಟಿ., ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ | ಸದಸ್ಯರು |
| 8. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಇಲಾಖೆ | ಸದಸ್ಯರು |
| 9. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯರು |
| 10. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಸದಸ್ಯರು |
| 11. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ ಇಲಾಖೆ | ಸದಸ್ಯರು |
| 12. | ಸರ್ಕಾರದ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ | ಸದಸ್ಯರು |
| 13. | ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿ, ಬೆಂಗಳೂರು | ಸದಸ್ಯರು |
| 14. | ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ | ಸದಸ್ಯರು |
| 15. | ಸದಸ್ಯ ಕಾರ್ಯದರ್ಶಿ, ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ | ಸದಸ್ಯ ಕಾರ್ಯದರ್ಶಿ |

### 2.ಉನ್ನತ ಮಟ್ಟದ ಇಲಾಖಾ ಪರಿಶೀಲನಾ ಸಮಿತಿಯ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು:

- ಅನಿವಾಸಿ ಭಾರತೀಯ ಸಮಿತಿಯ ನೀತಿಯ ಎಲ್ಲಾ ಅಂಶಗಳ ಅನುಷ್ಠಾನದ ಪ್ರಗತಿಯ ಬಗ್ಗೆ ಪರಿಶೀಲಿಸಲು ಈ ಸಮಿತಿಯು ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಸೇರುತ್ತದೆ.
- ಅನಿವಾಸಿ ಭಾರತೀಯ ಸಮಿತಿಯ ನೀತಿಗೆ ಸಂಬಂಧಿಸಿದಂತೆ ಎಲ್ಲಾ ಸರ್ಕಾರಿ ಇಲಾಖೆಗಳೂ ಅವಶ್ಯಕ ಅಧಿಕಾರಯುತ ಆಜ್ಞೆಗಳನ್ನು ಸಮಯಕ್ಕೆ ಸರಿಯಾಗಿ ಹೊರಡಿಸುವುದನ್ನು ಈ ಸಮಿತಿಯು ಖಾತ್ರಿಪಡಿಸುತ್ತದೆ.
- ಅನಿವಾಸಿ ಭಾರತೀಯ ನೀತಿಯ ಸುಗಮ ಅನುಷ್ಠಾನಕ್ಕಾಗಿ ಈ ಸಮಿತಿಯು ಅವಶ್ಯವಿದ್ದಲ್ಲಿ ಮಧ್ಯಂತರ ತಿದ್ದುಪಡಿಗಳಿಗೆ ಶಿಫಾರಸು ಮಾಡುತ್ತದೆ.

ಈ ನೀತಿಯ ಉಪಕ್ರಮಗಳ ಪರಿಣಾಮವನ್ನು ಅಳೆಯಲು ಪ್ರಖ್ಯಾತ ಸಂಸ್ಥೆಗಳೊಡನೆ ಅನಿವಾಸಿ ಭಾರತೀಯ ಸಮಿತಿಯು ಸಂಶೋಧನೆ, ಅಧ್ಯಯನ, ಸಮೀಕ್ಷೆ ಇತ್ಯಾದಿಗಳನ್ನು ನಡೆಸುತ್ತದೆ ಮತ್ತು ನೀತಿ ಹಾಗೂ ಅದರ ಅನುಷ್ಠಾನದ ಬಗ್ಗೆ ಸಂಬಂಧಿತ ಪ್ರತಿಕ್ರಿಯೆಗಳನ್ನೂ ನೀಡುತ್ತದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು**

**ಅವರ ಹೆಸರಿನಲ್ಲಿ,**

S. Umadevi

(ಎಸ್.ಉಮಾದೇವಿ)

**ಪೀಠಾಧಿಕಾರಿ (ತಾಂತ್ರಿಕ ಘಟಕ),**

**ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,**

## ಕರ್ನಾಟಕ ಸರ್ಕಾರದ ನಡಾವಳಿಗಳು

**ವಿಷಯ** : ಕರ್ನಾಟಕದ ಅನಿವಾಸಿ ಭಾರತೀಯ ನೀತಿಯನ್ವಯ ಜಿಲ್ಲಾ ಮಟ್ಟದ ಅನಿವಾಸಿ ಭಾರತೀಯರ/ ಕನ್ನಡಿಗರ ಹಿತರಕ್ಷಣಾ ಸಮಿತಿಯ ರಚನೆ

**ಓದಲಾಗಿದೆ** : ಸರ್ಕಾರಿ ಆದೇಶ ಸಂಖ್ಯೆ : ಸಿ.ಐ. 207 ಎಸ್.ಪಿ.ಐ. 2016ದಿ:02.12.2016.

**ಪ್ರಸ್ತಾವನೆ:**

ತಮ್ಮ ಕೌಶಲ್ಯವನ್ನು ವೃದ್ಧಿಸಿಕೊಂಡು ಹೊರದೇಶಗಳ ಕುಶಲಕರ್ಮಿ ಉದ್ಯೋಗಿಗಳ ಕೊರತೆಯನ್ನು ತುಂಬಲು, ಆ ಅವಕಾಶಗಳನ್ನು ಬಳಸಿಕೊಳ್ಳಲು ಕನ್ನಡಿಗರಿಗೆ ಬೆಂಬಲ ನೀಡುವುದಲ್ಲದೆ, ತಾವು ನೆಲೆಸಿರುವ ದೇಶಗಳಲ್ಲಿ ಅಸಾಧಾರಣ ಸಾಧನೆ ಮಾಡಿರುವ ಅನಿವಾಸಿ ಭಾರತೀಯರು/ ಕನ್ನಡಿಗರು ತಮ್ಮ ಜ್ಞಾನ, ಶಕ್ತಿ, ಸಾಮರ್ಥ್ಯಗಳನ್ನು ಭಾರತ/ಕರ್ನಾಟಕಗಳ ಅಭಿವೃದ್ಧಿಗಾಗಿ ಕೊಡುಗೆ ನೀಡುವಂತೆ ಅವರನ್ನು ಪ್ರೇರೇಪಿಸಲು, ಕರ್ನಾಟಕ ಸರ್ಕಾರವು ಮೇಲೆ ಓದಲಾಗಿರುವ ಕರ್ನಾಟಕದ ಅನಿವಾಸಿ ಭಾರತೀಯರ ನೀತಿಯನ್ನು ರೂಪಿಸಿ ಘೋಷಿಸಿದೆ.

ಸರ್ಕಾರಿ ಆದೇಶ : ಸಿಆಸುಇ /68/ಶಿಸನೇ/2008 ದಿನಾಂಕ: 05.08.2008ರ ಪ್ರಕಾರ, ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ರಾಜ್ಯ ಮಟ್ಟದ ಅನಿವಾಸಿ ಭಾರತೀಯರ ಸಮಿತಿಯೊಂದಿಗೆ ಸಹಕರಿಸಲು ಮತ್ತು ಅದನ್ನು ಬೆಂಬಲಿಸಲು ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ, ಜಿಲ್ಲಾ ಪೊಲೀಸು ವರಿಷ್ಠಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರುಗಳ ಸದಸ್ಯತ್ವದಲ್ಲಿ, ಜಿಲ್ಲಾ ಕೇಂದ್ರದ ಉಪವಿಭಾಗಾಧಿಕಾರಿಗಳು ಸಂಚಾಲಕತ್ವದಲ್ಲಿ ಸಮಿತಿ ಜಿಲ್ಲಾಮಟ್ಟದ ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಹಿತರಕ್ಷಣಾ ಸಮಿತಿಯನ್ನು ರಚಿಸಲಾಗುವುದು ಎಂದು ಈ ನೀತಿಯಲ್ಲಿ ಹೇಳಲಾಗಿದೆ.

ಈ ಹಿನ್ನಲೆಯಲ್ಲಿ ಸರ್ಕಾರವು ಈ ಕೆಳಕಂಡ ಆದೇಶ ಹೊರಡಿಸಿದೆ:

**ಸರ್ಕಾರದ ಆದೇಶ ಸಂಖ್ಯೆ: ಸಿ.ಐ. 207 ಎಸ್.ಪಿ.ಐ. 2016, ಬೆಂಗಳೂರು, ದಿನಾಂಕ: 02.12.2016.**

ಮೇಲೆ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಅನಿವಾಸಿ ಭಾರತೀಯರ/ಕನ್ನಡಿಗರ ಹಿತರಕ್ಷಣಾ ಸಮಿತಿಯನ್ನು ಈ ಕೆಳಕಂಡಂತೆ ಸ್ಥಾಪಿಸಲು ಹರ್ಷಿಸುತ್ತದೆ:

| | |
|---|---|
| 1. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2. ಆಯಾ ಜಿಲ್ಲೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು | ಸದಸ್ಯರು |
| 3. ಆಯಾ ಜಿಲ್ಲಾ ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕರು | ಸದಸ್ಯರು |
| 4. ಆಯಾ ಜಿಲ್ಲೆಯ ಎಲ್ಲಾ ಉಪವಿಭಾಗಗಳ ಉಪವಿಭಾಗಾಧಿಕಾರಿಗಳು | ಸದಸ್ಯರು |
| 5. ಆಯಾ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ತಹಶೀಲ್ದಾರರುಗಳು | ಸದಸ್ಯರು |
| 6. ಆಯಾ ಜಿಲ್ಲೆಯ ಜಿಲ್ಲಾ ಕೇಂದ್ರ ಸ್ಥಾನದ ಉಪವಿಭಾಗಾಧಿಕಾರಿಗಳು | ಸಂಚಾಲಕಕರು |

–31–



ಕರ್ನಾಟಕದ ಅನಿವಾಸಿ ಭಾರತೀಯ ನೀತಿ

**2.ಜಿಲ್ಲಾ ಮಟ್ಟದ ಅನಿವಾಸಿ ಭಾರತೀಯರ/ ಕನ್ನಡಿಗರ ಹಿತರಕ್ಷಣಾ ಸಮಿತಿಯ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು :**

- ಅನಿವಾಸಿ ಭಾರತೀಯ ನೀತಿಯ ಎಲ್ಲಾ ಹಿತರಕ್ಷಣಾ ಉಪಕ್ರಮಗಳ ಅನುಷ್ಠಾನಕ್ಕಾಗಿ ರಾಜ್ಯ ಮಟ್ಟದ ಅನಿವಾಸಿ ಭಾರತೀಯ ಸಮಿತಿಯೊಂದಿಗೆ ಜಿಲ್ಲಾ ಮಟ್ಟದ ಹಿತರಕ್ಷಣಾ ಸಮಿತಿಯು ಸಹಕರಿಸುತ್ತದೆ ಮತ್ತು ಅದನ್ನು ಬೆಂಬಲಿಸುತ್ತದೆ.
- ಅನಿವಾಸಿ ಭಾರತೀಯ ನೀತಿಯ ಎಲ್ಲಾ ಹಿತರಕ್ಷಣಾ ಉಪಕ್ರಮಗಳ ಅನುಷ್ಠಾನದ ಪ್ರಗತಿಯ ಬಗ್ಗೆ ಪರಿಶೀಲಿಸಲು ಈ ಸಮಿತಿಯು ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಸೇರುತ್ತದೆ.
- ಜಿಲ್ಲಾ ಮಟ್ಟದ ಹಿತರಕ್ಷಣಾ ಸಮಿತಿಯು ಜಿಲ್ಲೆಯ ಎಲ್ಲಾ ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಸಮಗ್ರ ಮಾಹಿತಿಯೊಡನೆ ದತ್ತಾಂಶವನ್ನು ಸುಸ್ಥಿರವಾಗಿ ಸಂಗ್ರಹಿಸುವುದು.
- ಪಂಚಾಯಿತಿಗಳನ್ನೂ ಸೇರಿಸಿಕೊಂಡಂತೆ ಜಿಲ್ಲೆಯ ಅಭಿವೃದ್ಧಿ ಯೋಜನೆಗಳ ಸುಗಮೀಕರಣದಲ್ಲಿ ಜಿಲ್ಲಾ ಸಮಿತಿಯು ಅನಿವಾಸಿ ಭಾರತೀಯ ಸಮಿತಿಯೊಡನೆ ಸಹಕರಿಸುತ್ತದೆ ಮತ್ತು ಅನಿವಾಸಿ ಭಾರತೀಯರ/ ಕನ್ನಡಿಗರ ಭಾಗವಹಿಕೆಯನ್ನು ಸುಗಮಗೊಳಿಸುತ್ತದೆ.
- ತುರ್ತು ಸಹಾಯದ ಅವಶ್ಯಕತೆಯಿರುವ ಜಿಲ್ಲೆಯ ಅನಿವಾಸಿ ಭಾರತೀಯರ/ ಕನ್ನಡಿಗರ ಕುಟುಂಬದ ಸದಸ್ಯರಿಗೆ, ಜಿಲ್ಲಾ ಮಟ್ಟದ ಅನಿವಾಸಿ ಭಾರತೀಯರ/ ಕನ್ನಡಿಗರ ಹಿತರಕ್ಷಣಾ ಸಮಿತಿಯು, ಆ ಕುರಿತು ಸುದ್ದಿ ಪ್ರಕಟಣೆ, ಸ್ಥಳೀಯ ಸಹಾಯ ಮತ್ತು ಅಗತ್ಯ ನೆರವು ನೀಡುತ್ತದೆ.
- ತಮ್ಮ ಮಾತೃಭೂಮಿಗೆ ಶಾಶ್ವತವಾಗಿ ಸ್ಥಳಾಂತರಗೊಳ್ಳುವ ಅನಿವಾಸಿ ಭಾರತೀಯರಿಗೆ/ ಅನಿವಾಸಿ ಕನ್ನಡಿಗರಿಗೆ ಸಾಧ್ಯವಿರುವ ಎಲ್ಲಾ ಸಹಾಯಗಳನ್ನೂ, ವಸತಿ ದಾಖಲಾತಿಗಳು, ತೆರಿಗೆ ಸಂಬಂಧಿತ ತೊಡಕುಗಳು, ಅನಿವಾಸಿಗಳ ವಿದೇಶೀ ಹಣಕಾಸು (FCNR) ವಿವಾದಾಂಶಗಳು ಮುಂತಾದವುಗಳ ಬದಲಾವಣೆಯಲ್ಲಿ ಬೇಕಾದ ಸಹಾಯಗಳನ್ನೂ ಜಿಲ್ಲಾ ಅನಿವಾಸಿ ಭಾರತೀಯರ/ ಕನ್ನಡಿಗರ ಹಿತರಕ್ಷಣಾ ಸಮಿತಿಯು ರಾಜ್ಯದ ಅನಿವಾಸಿ ಭಾರತೀಯ ಸಮಿತಿಯೊಂದಿಗೆ ಸಹಕರಿಸುತ್ತದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು**
**ಅವರ ಹೆಸರಿನಲ್ಲಿ,**

S. Umadevi

(ಎಸ್.ಉಮಾದೇವಿ)

**ಪೀಠಾಧಿಕಾರಿ (ತಾಂತ್ರಿಕ ಘಟಕ),**
**ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,**

## ವಿದೇಶಾಂಗ ಸಚಿವಾಲಯದ ಪ್ರಮುಖ ಕಚೇರಿಗಳ ಸಂಪರ್ಕ ವಿವರಗಳು

### ಸಾಗರೋತ್ತರ ಕಾರ್ಮಿಕರ ಸಂಪನ್ಮೂಲ ಕೇಂದ್ರ (OWRC), ಗುರ್‌ಗಾವ್ ಮತ್ತು ಅನಿವಾಸಿಗರ ಸಂಪನ್ಮೂಲ ಕೇಂದ್ರಗಳು (MRCs), ಕೊಚ್ಚಿ

| ವಿವರಗಳು | ಅನಿವಾಸಿಗರ ಸಂಪನ್ಮೂಲ ಕೇಂದ್ರಗಳು | | | | |
|---|---|---|---|---|---|
| | ಕೊಚ್ಚಿ | ಹೈದರಾಬಾದ್ | ಹರ್ಯಾಣ | ತಮಿಳುನಾಡು | ಲಕ್ನೋ |
| ವಿಳಾಸ | ಅನಿವಾಸಿಗರ ಸಂಪನ್ಮೂಲ ಕೇಂದ್ರ, 3ನೇ ಮಹಡಿ, ಮತೆರಿಕಲ್ ಬಿಲ್ಡಿಂಗ್, ಮಾರ್ಕೆಟ್ ರಸ್ತೆ, ಎರ್ನಾಕುಳಂ, ಕೇರಳ–682035 | ಅನಿವಾಸಿಗರ ರಕ್ಷಣಾ ಕೇಂದ್ರ, ಅನಿವಾಸಿಗರ ರಕ್ಷಣಾಧಿಕಾರಿ (Immigrant Protection Officer) ಕಚೇರಿ, ಗೃಹಕಲ್ಪ ಬಿಲ್ಡಿಂಗ್, ಎಂ.ಜೆ. ರಸ್ತೆ, ಹೈದರಾಬಾದ್–500001 | ಅನಿವಾಸಿಗರ ಸಂಪನ್ಮೂಲ ಕೇಂದ್ರ, ನಿವೇಶನ 218, 2ನೇ ಮಹಡಿ, ಉದ್ಯೋಗ ವಿಹಾರ, 4ನೇ ಫೇಸ್, ಗುರ್‌ಗಾವ್, ಹರ್ಯಾಣ–122016 | ಆಯುಕ್ತರು ಮನರ್ವಸತಿ ಮತ್ತು ಅನಿವಾಸಿ ತಮಿಳರ ಹಿತರಕ್ಷಣಾ , ಕಾರ್ಯಲಯ, ಎಳಿಲಾಗಂ ಅನ್ನೆಕ್ಸ್ ಬಿಲ್ಡಿಂಗ್, 4ನೇ ಮಹಡಿ, ಬೀಚ್ ರಸ್ತೆ, ಚೀಪಾಕ್, ಚೆನ್ನೈ–600005 | ಅನಿವಾಸಿ ಭಾರತೀಯರ ಘಟಕ, ಯು.ಪಿ.ಎಫ್.ಸಿ. ಕಚೇರಿ, 18, ಮದನ ಮೋಹನ ಮಾಳವೀಯ ಮಾರ್ಗ, ಲಕ್ನೋ–226001 |
| ದೂರವಾಣಿ | +91 484 2372040 | +91 40 24652557 | +91 124 4420215 | +91 44 32008401 | +91 522 4954646 |
| ಇ–ಅಂಚೆ | mrckochi@owrc.in | mrchyd@owrc.in | helpline@owrc.in | helpline@owrc.in | helpline@owrc.in |
| ಜಾಲತಾಣ | www.moia.gov.in & www.owrc.in | | | | |

**ಸಾಗರೋತ್ತರ ಭಾರತೀಯರ, ಭಾರತ ಅಭಿವೃದ್ಧಿ ವೇದಿಕೆ(IDF-OI),**
ಕೊಠಡಿ ಸಂಖ್ಯೆ : 927, ವಿದೇಶಾಂಗ ಸಚಿವಾಲಯ,
ಅಕ್ಬರ್ ಭವನ, ಸತ್ಯ ಮಾರ್ಗ, ಚಾಣಕ್ಯಮರಿ, ನವದೆಹಲಿ–110021
ದೂರವಾಣಿ: +91 11 26881052 / 24676210
ಫ್ಯಾಕ್ಸ್: +91 11 26882431
ಇ–ಅಂಚೆ: ceo.idf@moia.nic.in
ಜಾಲತಾಣ: http://www.idfoi.org

**ಸಾಗರೋತ್ತರ ಭಾರತೀಯ ಸುಗಮೀಕರಣ ಕೇಂದ್ರ (OIFC),**
ಆಶ್ರಯ: ಭಾರತೀಯ ಕೈಗಾರಿಕಾ ಒಕ್ಕೂಟ (CII),
249–ಎಫ್. 18ನೇ ಸೆಕ್ಟರ್, ಉದ್ಯೋಗ ವಿಹಾರ,
4ನೇ ಫೇಸ್, ಗುರ್‌ಗಾವ್–122015, ಹರ್ಯಾಣ, ಭಾರತ.
ದೂರವಾಣಿ: +91 124 4014055 / 4014056
ಫ್ಯಾಕ್ಸ್: +91 124 4309446; ಇ–ಅಂಚೆ: oifc@ciiin
ಜಾಲತಾಣ: http://www.ioifc.in

**ಭಾರತೀಯ ಕಾರ್ಮಿಕರ ಸಂಪನ್ಮೂಲ ಕೇಂದ್ರ (IWRC),**
15–ಎಲ್, ಸಿಲ್ವರ್ ಟವರ್, ಕ್ಲಸ್ಟರ್–1, ಜುಮೈರಾ ಲೇಕ್ ಟವರ್ಸ್,
ಅಂಚೆ ಪೆಟ್ಟಿಗೆ ಸಂಖ್ಯೆ: 62494, ದುಬೈ (ಯು.ಎ.ಇ.),
ದೂರವಾಣಿ: 00971 44 340 899
ಫ್ಯಾಕ್ಸ್: 00971 4430 7492
ಜಾಲತಾಣ: iwrcuae.in
ಯು.ಎ.ಇ.ಯಲ್ಲಿನ 24 x 7 ಉಚಿತ ಸಹಾಯವಾಣಿ ಸಂಖ್ಯೆ: 80046342

**ಭಾರತೀಯ ವಲಸೆ ಕೇಂದ್ರ (ICM),**
ಕೊಠಡಿ ಸಂಖ್ಯೆ : 1011, ವಿದೇಶಾಂಗ ಸಚಿವಾಲಯ,
ಅಕ್ಬರ್ ಭವನ, ಯಶವಂತ್ ಪ್ಲೇಸ್, ಚಾಣಕ್ಯಮರಿ, ನವದೆಹಲಿ–110021
ದೂರವಾಣಿ: +91 11 24675341





## ಕರ್ನಾಟಕ ಸರ್ಕಾರದ ಪ್ರಮುಖ ಅಧಿಕಾರಿಗಳ ಸಂಪರ್ಕ ವಿವರಗಳು

**ಉಪಾಧ್ಯಕ್ಷರು, ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ**
**ಕರ್ನಾಟಕ ಸರ್ಕಾರ**
ಕೊಠಡಿ ಸಂಖ್ಯೆ: 305 ಮತ್ತು 308, 3ನೇ ಮಹಡಿ,
4ನೇ ಗೇಟ್, ಬಹುಮಹಡಿ ಕಟ್ಟಡ,
ಬೆಂಗಳೂರು–560001, ಕರ್ನಾಟಕ, ಭಾರತ.
ದೂ: +91 8022372020/22382020
ಇ–ಅಂಚೆ:dycnriforum@karnataka.gov.in
ಜಾಲತಾಣ: nriforum.karnataka.gov.in

**ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ** ಇಲಾಖೆ, ಕೊಠಡಿ ಸಂಖ್ಯೆ: 106, 1ನೇ ಮಹಡಿ, ವಿಕಾಸ ಸೌಧ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು–560001, ದೂರವಾಣಿ: +91 80 22252443, ಫ್ಯಾಕ್ಸ್: +91 80 22259870, ಇ–ಅಂಚೆ: prs-ci@karnataka.gov.in, acscikar@gmail.com, ಜಾಲತಾಣ: www.karnatakaindustry.gov.in

**ಸರ್ಕಾರದ ಪ್ರಧಾನ ಕಾರ್ಯದರ್ಶಿ, ಐ.ಟಿ., ಬಿ.ಟಿ., ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ,** 6ನೇ ಮಹಡಿ, 5ನೇ ಹಂತ, ಎಂ.ಎಸ್.ಬಿಲ್ಡಿಂಗ್, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು–560001, ದೂರವಾಣಿ: +91 80 22280562, 22032434 ಫ್ಯಾಕ್ಸ್: +91 80 22288340, 22262450, ಇ–ಅಂಚೆ: itsec@bangaloreitbtin, ಜಾಲತಾಣ: www.banagloreitbtin

**ಸ್ಥಾನಿಕ ಆಯುಕ್ತರು, ಕರ್ನಾಟಕ ಭವನ,** 10, ಕೌಟಿಲ್ಯ ಮಾರ್ಗ, ಚಾಣಕ್ಯಮರಿ, ನವದೆಹಲಿ–110021, ದೂರವಾಣಿ: +91 11 26889814, +91 11 24103701, ಇ–ಅಂಚೆ: rckarnatakanewdelhi@ gmail.com,

**ಕೈಗಾರಿಕಾ ಅಭಿವೃದ್ಧಿ ಆಯುಕ್ತರು ಮತ್ತು ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶಕರು,** 2ನೇ ಮಹಡಿ, ದಕ್ಷಿಣ ಕಟ್ಟಡ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001, ದೂರವಾಣಿ: +91 80 22386796, ಫ್ಯಾಕ್ಸ್: +91 80 22389909, ಇ–ಅಂಚೆ: commissioner@karnatakaindustry.gov.in ಜಾಲತಾಣ: www.karnatakindustry.gov.in

**ಸರ್ಕಾರದ ಕಾರ್ಯದರ್ಶಿ (ಸಣ್ಣ ಕೈಗಾರಿಕೆ, ಗಣಿ ಮತ್ತು ಸಕ್ಕರೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,** ಕೊಠಡಿ ಸಂಖ್ಯೆ: 135, 1ನೇ ಮಹಡಿ, ವಿಕಾಸ ಸೌಧ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು–560001, ದೂರವಾಣಿ: +91 80 22034235, ಫ್ಯಾಕ್ಸ್: +91 80 22356381, ಇ–ಅಂಚೆ: secymines-ci@karnataka.gov.in, ಜಾಲತಾಣ: www.karnatakaindustry.gov.in

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಕಾರ್ಯಕಾರಿ ಸದಸ್ಯ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ,** 4ನೇ ಮಹಡಿ, ಪಶ್ಚಿಮ ದ್ವಾರ, ಖನಿಜ ಭವನ, ಬೆಂಗಳೂರು–560001. ದೂರವಾಣಿ: +91 80 41738621, ಫ್ಯಾಕ್ಸ್: +91 80 22267901, ಇ–ಅಂಚೆ: kiadb@bgl.vsnl.net.in, ಜಾಲತಾಣ: www.kiadb.in

**ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತ,** 4ನೇ ಮಹಡಿ, ಪೂರ್ವ ದ್ವಾರ, ಖನಿಜ ಭವನ, ಬೆಂಗಳೂರು–560001. ದೂರವಾಣಿ: +91 80 22255911, ಫ್ಯಾಕ್ಸ್: +91 80 22255740, ಇ–ಅಂಚೆ: kssidc@bgl.vsn.net.in, ಜಾಲತಾಣ: www.kssidc.com

**ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ,** ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560010. ದೂರವಾಣಿ: +91 80 23303037, +91 80 22217702, ಇ–ಅಂಚೆ: kssidcho@vsnl.com, ಜಾಲತಾಣ: www.kssidc.kar.nic.in

**ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ವ್ಯಾಪಾರ ಅಭಿವೃದ್ಧಿ ಕೇಂದ್ರ,** 3ನೇ ಮಹಡಿ, ವಿ.ಟಿ.ಪಿ.ಸಿ. ಕಟ್ಟಡ, ಕಸ್ತೂರಬಾ ರಸ್ತೆ, ಬೆಂಗಳೂರು–560001. ದೂರವಾಣಿ: +91 80 22210633, ಫ್ಯಾಕ್ಸ್: +91 80 22210655, ಇ–ಅಂಚೆ: vtpckarnataka@gmail.com, ಜಾಲತಾಣ: www.vitcblr.org

**ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ,** 3ನೇ ಮಹಡಿ, ದಕ್ಷಿಣ ವಲಯ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. ದೂರವಾಣಿ: +91 80 22282392 / 5659 / 6632, ಫ್ಯಾಕ್ಸ್: +91 80 22266063, ಇ–ಅಂಚೆ: md@kumbangalore.com, ಜಾಲತಾಣ: www.kumbangalore.com

**ಸದಸ್ಯ ಕಾರ್ಯದರ್ಶಿ, ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ**
**ಕರ್ನಾಟಕ ಸರ್ಕಾರ**
ಕೊಠಡಿ ಸಂಖ್ಯೆ: 220ಇ ಮತ್ತು 220 ಎಫ್, 2ನೇ ಮಹಡಿ,
ವಿಕಾಸಸೌಧ, ಬೆಂಗಳೂರು–560001, ಕರ್ನಾಟಕ, ಭಾರತ.
ದೂ: +91 8022035076/22286778
ಇ–ಅಂಚೆ: msnriforum@gmail.com
msnriforum@karnataka.gov.in
ಜಾಲತಾಣ: nriforum.karnataka.gov.in

## ಜಿಲ್ಲಾ ಮಟ್ಟದ ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಹಿತರಕ್ಷಣಾ ಸಮಿತಿಯ ಸಂಚಾಲಕರ ಸಂಪರ್ಕ ವಿವರಗಳು

1 **ಉಪ ವಿಭಾಗಾಧಿಕಾರಿಗಳ ಕಚೇರಿ,** ಬೆಂಗಳೂರು ಉತ್ತರ ವಿಭಾಗ, ಕಂದಾಯ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು(ನಗರ), ಕಚೇರಿ: +91 80 22100056, ಫ್ಯಾಕ್ಸ್: +91 80 22210056, ಇ-ಅಂಚೆ: acnorthblr@gmail.com

2 **ಉಪ ವಿಭಾಗಾಧಿಕಾರಿಗಳ ಕಚೇರಿ,** ಬೆಂಗಳೂರು ದಕ್ಷಿಣ ವಿಭಾಗ, ಕಂದಾಯ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು(ನಗರ), ಕಚೇರಿ: +91 80 22210076 ಫ್ಯಾಕ್ಸ್: +91 80 22210076, acsouthblr@gmail.com

3 **ಉಪ ವಿಭಾಗಾಧಿಕಾರಿಗಳ ಕಚೇರಿ,** ದೊಡ್ಡಬಳ್ಳಾಪುರ ಉಪವಿಭಾಗ, ದೊಡ್ಡಬಳ್ಳಾಪುರ, ಬೆಂಗಳೂರು(ಗ್ರಾಮಾಂತರ) ಕಚೇರಿ: +91 80 27622037 ಫ್ಯಾಕ್ಸ್: +91 80 27622037, acdbpsubdiv@gmail.com

4 **ಉಪ ವಿಭಾಗಾಧಿಕಾರಿಗಳ ಕಚೇರಿ,** ನವನಗರ ಬಸ್ ನಿಲ್ದಾಣ, ಬಾಗಲಕೋಟೆ, ಕಚೇರಿ: +91 8354 235660 ಫ್ಯಾಕ್ಸ್: +91 8354 235660, acbagalkot01@gmail.com

5 **ಉಪ ವಿಭಾಗಾಧಿಕಾರಿಗಳ ಕಚೇರಿ,** ಬೆಳಗಾವಿ ಉಪವಿಭಾಗ, ಬೆಳಗಾವಿ, ಕಚೇರಿ: +91 0831 2407200 ಫ್ಯಾಕ್ಸ್: 2407284 acbelgaum@gmail.com

6 **ಉಪ ವಿಭಾಗಾಧಿಕಾರಿಗಳ ಕಚೇರಿ,** ರೈಲ್ವೆ ಸ್ಟೇಷನ್ ಎದುರು, ಬಳ್ಳಾರಿ, ಕಚೇರಿ: +91 08392 277413 ಫ್ಯಾಕ್ಸ್: acbellary@gmail.com

7 **ಉಪ ವಿಭಾಗಾಧಿಕಾರಿಗಳ ಕಚೇರಿ,** ಬೀದರ್ ಉಪವಿಭಾಗ, ಬೀದರ್, ಕಚೇರಿ: +91 08482 225373, ಫ್ಯಾಕ್ಸ್: +91 08482 225262 acbidar@gmail.com

8 **ಉಪ ವಿಭಾಗಾಧಿಕಾರಿಗಳ ಕಚೇರಿ,** ವಿಜಯಪುರ ಉಪವಿಭಾಗ, ವಿಜಯಪುರ, ಕಚೇರಿ: +91 08352 278285 ಫ್ಯಾಕ್ಸ್: +91 08352 278285 acbijapur@gmail.com

9 **ಉಪ ವಿಭಾಗಾಧಿಕಾರಿಗಳ ಕಚೇರಿ,** ಕೊಳ್ಳೇಗಾಲ ಉಪವಿಭಾಗ, ಕೊಳ್ಳೇಗಾಲ, ಕಚೇರಿ: +91 08224 253615 ಫ್ಯಾಕ್ಸ್: +91 08224 253615 acofficekollgal@gmail.com

10 **ಉಪ ವಿಭಾಗಾಧಿಕಾರಿಗಳ ಕಚೇರಿ,** ಚಿಕ್ಕಮಗಳೂರು ಉಪವಿಭಾಗ, ಚಿಕ್ಕಮಗಳೂರು, ಕಚೇರಿ: +91 08262 230527 ಫ್ಯಾಕ್ಸ್: +91 08262 230527 acckm123@gmail.com

11 **ಉಪ ವಿಭಾಗಾಧಿಕಾರಿಗಳ ಕಚೇರಿ,** ಜಿಲ್ಲಾ ಸೆಷನ್ ನ್ಯಾಯಾಲಯದ ಎದುರು, ಚಿಕ್ಕಬಳ್ಳಾಪುರ, ಕಚೇರಿ: +91 08156 272504 ಫ್ಯಾಕ್ಸ್: +91 08156 272504, ac.cbpur@gmail.com

12 **ಉಪ ವಿಭಾಗಾಧಿಕಾರಿಗಳ ಕಚೇರಿ,** ಜಿಲ್ಲಾಧಿಕಾರಿಗಳ ಕಟ್ಟಡ, ಚಿತ್ರದುರ್ಗ, ಕಚೇರಿ: +91 08194 222413 ಫ್ಯಾಕ್ಸ್: +91 08194222413 ac.chitradurga@gmail.com

13 **ಉಪ ವಿಭಾಗಾಧಿಕಾರಿಗಳ ಕಚೇರಿ,** ಮಂಗಳೂರು ಉಪವಿಭಾಗ, ಮಂಗಳೂರು, ಕಚೇರಿ: +91 0824 2220569 ಫ್ಯಾಕ್ಸ್: +91 0824 2220569 ac.mlore@gmail.com

14 **ಉಪ ವಿಭಾಗಾಧಿಕಾರಿಗಳ ಕಚೇರಿ,** ದಾವಣಗೆರೆ ಉಪವಿಭಾಗ, ದಾವಣಗೆರೆ, ಕಚೇರಿ: +91 08192 272955 ಫ್ಯಾಕ್ಸ್: +91 08192 272955 ero.dvg.div@gmail.com

15 **ಉಪ ವಿಭಾಗಾಧಿಕಾರಿಗಳ ಕಚೇರಿ,** ಧಾರವಾಡ ಉಪವಿಭಾಗ, ಧಾರವಾಡ, ಕಚೇರಿ: +91 0836 2233860 ಫ್ಯಾಕ್ಸ್: +91 0836 2747102 acdharwad123@gmail.com

16 **ಉಪ ವಿಭಾಗಾಧಿಕಾರಿಗಳ ಕಚೇರಿ,** ಗದಗ ಉಪವಿಭಾಗ, ಗದಗ, ಕಚೇರಿ: +91 08372 238506 ಫ್ಯಾಕ್ಸ್: +91 08372 238506 acgadag@gmail.com

17 **ಉಪ ವಿಭಾಗಾಧಿಕಾರಿಗಳ ಕಚೇರಿ,** ಜಿಲ್ಲಾ ಪಂಚಾಯಿತಿ ಕಚೇರಿ ಎದುರು, ಜಗತ್ ವೃತ್ತ, ಕಲಬುರ್ಗಿ, ಕಚೇರಿ: +91 08472 278656 ಫ್ಯಾಕ್ಸ್: +91 08472 273044 acgulbarga@gmail.com





18 **ಉಪ ವಿಭಾಗಾಧಿಕಾರಿಗಳ,** ಹಾಸನ ಉಪವಿಭಾಗ, ಹಾಸನ, ಕಚೇರಿ: +91 08172 268403 ಫ್ಯಾಕ್ಸ್: +91 08172 268403 hsn.sub@gmail.com

19 **ಉಪ ವಿಭಾಗಾಧಿಕಾರಿಗಳ ಕಚೇರಿ,** ಹಾವೇರಿ ಉಪವಿಭಾಗ, ಹಾವೇರಿ, ಕಚೇರಿ: +91 08375 232468 ಫ್ಯಾಕ್ಸ್: +91 08375 232468 ac.haveri@gmail.com

20 **ಉಪ ವಿಭಾಗಾಧಿಕಾರಿಗಳ ಕಚೇರಿ,** ಮಡಿಕೇರಿ ಉಪವಿಭಾಗ, ಕೊಡಗು, ಕಚೇರಿ: +91 08272 225469 ಫ್ಯಾಕ್ಸ್: +91 08272 225469 acmadikere225469@gmail.com

21 **ಉಪ ವಿಭಾಗಾಧಿಕಾರಿಗಳ ಕಚೇರಿ,** ಕೋಲಾರ ಉಪವಿಭಾಗ, ಕೋಲಾರ, ಕಚೇರಿ: +91 08152 222057 ಫ್ಯಾಕ್ಸ್: +91 08152 222057 ackolar07@gmail.com

22 **ಉಪ ವಿಭಾಗಾಧಿಕಾರಿಗಳ ಕಚೇರಿ,** ಜಿಲ್ಲಾ ಆಡಳಿತ ಸಂಕೀರ್ಣ, ಕೊಪ್ಪಳ, ಕಚೇರಿ: +91 08539 220247 ಫ್ಯಾಕ್ಸ್: +91 08539 220247 ackoppal@gmail.com

23 **ಉಪ ವಿಭಾಗಾಧಿಕಾರಿಗಳ ಕಚೇರಿ,** ಮಂಡ್ಯ ಉಪವಿಭಾಗ, ಮಂಡ್ಯ, ಕಚೇರಿ: +91 08232 224086 ಫ್ಯಾಕ್ಸ್: +91 08232 224086 ac.mandya@gmail.com

24 **ಉಪ ವಿಭಾಗಾಧಿಕಾರಿಗಳ ಕಚೇರಿ,** ಮೈಸೂರು ಉಪವಿಭಾಗ, ಮೈಸೂರು, ಕಚೇರಿ: +91 0821 2422100 ಫ್ಯಾಕ್ಸ್: +91 0821 2422100 mysac1@yahoo.com

25 **ಉಪ ವಿಭಾಗಾಧಿಕಾರಿಗಳ ಕಚೇರಿ,** ರಾಯಚೂರು ಉಪವಿಭಾಗ, ರಾಯಚೂರು, ಕಚೇರಿ: +91 80532 225630 ಫ್ಯಾಕ್ಸ್: +91 80532 229012 acraichur@gmail.com

26 **ಉಪ ವಿಭಾಗಾಧಿಕಾರಿಗಳ ಕಚೇರಿ,** ಮಿನಿ ವಿಧಾನ ಸೌಧ, ರಾಮನಗರ, ಕಚೇರಿ: +91 80 27271229 ಫ್ಯಾಕ್ಸ್: +91 80 27271229 acofficeramanagara@gmail.com

27 **ಉಪ ವಿಭಾಗಾಧಿಕಾರಿಗಳ ಕಚೇರಿ,** ಶಿವಮೊಗ್ಗ ಉಪವಿಭಾಗ, ಶಿವಮೊಗ್ಗ, ಕಚೇರಿ: +91 08182 222204 ಫ್ಯಾಕ್ಸ್: +91 08182 222204 ac.shimoga@gmail.com

28 **ಉಪ ವಿಭಾಗಾಧಿಕಾರಿಗಳ ಕಚೇರಿ,** ತುಮಕೂರು ಉಪವಿಭಾಗ, ತುಮಕೂರು, ಕಚೇರಿ: +91 0816 2278493 ಫ್ಯಾಕ್ಸ್: +91 0816 2278493 actmkar@gmail.com

29 **ಉಪ ವಿಭಾಗಾಧಿಕಾರಿಗಳ ಕಚೇರಿ,** ಕಾರವಾರ ಉಪವಿಭಾಗ, ಕಾರವಾರ, ಕಚೇರಿ: +91 08382 226360 ಫ್ಯಾಕ್ಸ್: +91 08382 226360 ackarwar@gmail.com

30 **ಉಪ ವಿಭಾಗಾಧಿಕಾರಿಗಳ,** ಕುಂದಾಪುರ ಉಪವಿಭಾಗ, ಉಡುಪಿ, ಕಚೇರಿ: +91 08254 231984 ಫ್ಯಾಕ್ಸ್: +91 08254 231984 ackundapur@gmail.com

31 **ಉಪ ವಿಭಾಗಾಧಿಕಾರಿಗಳ ಕಚೇರಿ,** ಯಾದಗಿರಿ ಉಪವಿಭಾಗ, ಯಾದಗಿರಿ, ಕಚೇರಿ: +91 08473 252688 ಫ್ಯಾಕ್ಸ್: +91 08473 252688 acyadgir@gmail.com

ಕರ್ನಾಟಕದಲ್ಲಿ ಹೂಡಿಕೆ

**ಹೆಚ್ಚಿನ ವಿವರಗಳಿಗೆ ದಯವಿಟ್ಟು ಸಂಪರ್ಕಿಸಿ:**


**ಉಪಾಧ್ಯಕ್ಷರು, ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ**
**ಕರ್ನಾಟಕ ಸರ್ಕಾರ**
ಕೊಠಡಿ ಸಂಖ್ಯೆ: 305 ಮತ್ತು 308, 3ನೇ ಮಹಡಿ,
4ನೇ ಗೇಟ್, ಬಹುಮಹಡಿ ಕಟ್ಟಡ,
ಬೆಂಗಳೂರು-560001, ಕರ್ನಾಟಕ, ಭಾರತ.
ದೂ: +91 8022372020/22382020
ಇ-ಅಂಚೆ:dycnriforum@karnataka.gov.in
ಜಾಲತಾಣ: nriforum.karnataka.gov.in


**ಸದಸ್ಯ ಕಾರ್ಯದರ್ಶಿ, ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ**
**ಕರ್ನಾಟಕ ಸರ್ಕಾರ**
ಕೊಠಡಿ ಸಂಖ್ಯೆ: 220ಇ ಮತ್ತು 220 ಎಫ್, 2ನೇ ಮಹಡಿ,
ವಿಕಾಸಸೌಧ, ಬೆಂಗಳೂರು-560001, ಕರ್ನಾಟಕ, ಭಾರತ.
ದೂ: +91 8022035076/22286778
ಇ-ಅಂಚೆ: msnriforum@gmail.com
msnriforum@karnataka.gov.in
ಜಾಲತಾಣ: nriforum.karnataka.gov.in

**ಕೈಗಾರಿಕಾ ಅಭಿವೃದ್ಧಿ ಆಯುಕ್ತರು**
**ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶಕರು**
ಸಂಖ್ಯೆ 49, ದಕ್ಷಿಣ ಬ್ಲಾಕ್, ಖನಿಜ ಭವನ, ರೇಸ್ ಕೋರ್ಸ್ ರಸ್ತೆ,
ಬೆಂಗಳೂರು-560001, ಕರ್ನಾಟಕ, ಭಾರತ.
ದೂ: +91 80 2238 9901 – 08, +91 80 2238 6796,
ಫ್ಯಾಕ್ಸ್ : +91 80 2238 9909
ಇ-ಅಂಚೆ : commissioner@karnatakaindustry.gov.in
ನಮ್ಮನ್ನು ಇಲ್ಲಿ ಭೇಟಿ ಮಾಡಿ: www.karnatakaindustry.gov.in

**ವ್ಯವಸ್ಥಾಪಕ ನಿರ್ದೇಶಕರು**
**ಕರ್ನಾಟಕ ಉದ್ಯೋಗ ಮಿತ್ರ**
3ನೇ ಮಹಡಿ, ಖನಿಜ ಭವನ(ಪೂರ್ವ ಬ್ಲಾಕ್),
ಸಂಖ್ಯೆ 49, ರೇಸ್ ಕೋರ್ಸ್ ರಸ್ತೆ,
ಬೆಂಗಳೂರು-560001, ಕರ್ನಾಟಕ, ಭಾರತ.
ದೂ: +91 80 2228 2392, 2228 5659, 2238 1232, 2238 6632,
ಫ್ಯಾಕ್ಸ್ : +91 80 2226 6063,
ಇ-ಅಂಚೆ : md@kumbangalore.com
ನಮ್ಮನ್ನು ಇಲ್ಲಿ ಭೇಟಿ ಮಾಡಿ: www.investkarnataka.co.in

ಕರ್ನಾಟಕ ಸರ್ಕಾರ

# ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ



## ನೀತಿಯ ಪ್ರಮುಖ ಅಂಶಗಳು

- ಅನಿವಾಸಿ ಕನ್ನಡಿಗರ ಕಾರ್ಡ್ ನೀಡುವುದು.
- ಅನಿವಾಸಿ ಕನ್ನಡಿಗರ ಹಾಗೂ ಸಂಸ್ಥೆಗಳೊಂದಿಗೆ ಸಂಪರ್ಕ ಸಾಧಿಸುವುದು.
- ವಿಶ್ವದಾದ್ಯಂತ ಕನ್ನಡ ಕೂಟಗಳಿಗೆ ಉತ್ತೇಜನ ನೀಡುವುದು.
- ಕರ್ನಾಟಕದ ಕಲೆ, ಸಂಸ್ಕೃತಿ ಮತ್ತು ಉತ್ಸವಗಳನ್ನು ಪ್ರೋತ್ಸಾಹಿಸುವುದು.
- ಅನಿವಾಸಿ ಭಾರತೀಯ/ ಅನಿವಾಸಿ ಕನ್ನಡಿಗ ಉದ್ಯಮಿಗಳ ಮಾರ್ಗದರ್ಶಕ ಘಟಕ ಸ್ಥಾಪಿಸುವುದು.
- ಅನಿವಾಸಿ ಕನ್ನಡಿಗರಿಗೆ ಉದ್ಯಮ ಪೋಷಣಾ ಕೇಂದ್ರ (Incubation Centre) ಗಳನ್ನು ಸ್ಥಾಪಿಸುವುದು.
- ಗಡಿಯಾಚೆಗಿನ ಉದ್ಯಮಗಳನ್ನು ಉತ್ತೇಜಿಸುವುದು.
- ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಸಾಮಾನ್ಯ ಹಿತರಕ್ಷಣಾ ಅಂಶಗಳಿಗೆ ಪರಿಹಾರ ನೀಡುವುದು.
- ಅನಿವಾಸಿ ಭಾರತೀಯರ/ ಅನಿವಾಸಿ ಕನ್ನಡಿಗರ ಬೆಂಬಲಕ್ಕಾಗಿ ಸೇವಾ ಕೇಂದ್ರಗಳನ್ನು ಸ್ಥಾಪಿಸುವುದು.
- ಸ್ವದೇಶಕ್ಕೆ ಮರಳುವ ಅನಿವಾಸಿ ಕಾರ್ಮಿಕರ /ಅನಿವಾಸಿ ಭಾರತೀಯರಿಗೆ/ ಅನಿವಾಸಿ ಕನ್ನಡಿಗರಿಗೆ ಹಿತರಕ್ಷಣಾ ಸೇವೆಗಳನ್ನೊದಗಿಸುವುದು.